# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಜುಲೈ 10, 2024

ಸಂಪುಟ : 51 ಸಂಚಿಕೆ : 57 ☎ 08192-254736 91642 99999 RNI No: 27369 ಪುಟ : 6 ರೂ. : 5.00 www.janathavani.com janathavani@mac.com


# ಮಕ್ಕಳನ್ನು ಶಾಲೆಗೆ ಕರೆ ತನ್ನಿ

## ಅಂಗನವಾಡಿ ಕಾರ್ಯಕರ್ತೆ ಹುದ್ದೆ ಭರ್ತಿ ಮಾಡಿ: ಸಿಎಂ ಸೂಚನೆ



ಬೆಂಗಳೂರು, ಜು. 9 - ಕಲಿಕೆಯಿಂದ ದೂರ ಉಳಿದ ಮಕ್ಕಳನ್ನು ಪತ್ತೆ ಹಚ್ಚಿ ಶಾಲೆಗೆ ಕರೆ ತನ್ನಿ, ಬಾಲ್ಯ ವಿವಾಹ ಮತ್ತು ಅಪ್ರಾಪ್ತರು ಗರ್ಭ ಧರಿಸುವುದನ್ನು ತಡೆಗಟ್ಟಿ, ಖಾಲಿ ಇರುವ ಅಂಗನವಾಡಿ ಕಾರ್ಯ ಕರ್ತೆ ಯರು ಮತ್ತು ಸಹಾಯಕಿಯರ ಹುದ್ದೆಗಳನ್ನು ಡಿಸೆಂಬರ್ ಒಳಗೆ ಭರ್ತಿ ಮಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಡಳಿತಕ್ಕೆ ಕಟ್ಟಾದೇಶ ನೀಡಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣ ದಲ್ಲಿ 2ನೇ ದಿನವಾದ ಇಂದು ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಗಳಿಗೆ ತಮ್ಮ ಅಧಿಕಾರ ಚಲಾ ಯಿಸಿ ನಿಗದಿತ ಸಮಯದೊಳಗೆ ಸರ್ಕಾರದ ಕಾರ್ಯ ಕ್ರಮ ಅನುಷ್ಠಾನಗೊಳಿಸಿ ಎಂದು ಸೂಚಿಸಿ ದರು.

ಸಾಮಾಜಿಕ, ಆರ್ಥಿಕ ಕಾರಣದಿಂದ ಶಾಲೆಯಿಂದ ದೂರ ಉಳಿದ ಮಕ್ಕಳ ಬಗ್ಗೆ ಕಾಳಜಿ ವಹಿಸಿ, ಶಿಕ್ಷಣ ಒದಗಿಸಿ. ರಾಜಪ್ಪ ಎಂಬ ಮೇಷ್ಟ್ರು ಶಾಲೆಯಿಂದ ಹೊರಗುಳಿದಿದ್ದ ನನ್ನನ್ನು ಶಾಲೆಗೆ ಮತ್ತೆ ಕರೆ ತರದಿದ್ದರೆ, ಇಂದು ನಿಮ್ಮನ್ನು ಮುಖ್ಯಮಂತ್ರಿಯಾಗಿ ಉದ್ದೇಶಿಸಿ ಮಾತನಾಡುವ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಹೇಳಿದರು.

ಬಡವರ ಬಗ್ಗೆ ಕಾಳಜಿ ತೋರಿಸಿ, ಮಕ್ಕಳಿಗೆ ಶಿಕ್ಷಣ ಕೊಡಿಸಿ, ಅವರು ಮುಂದೆ ದೇಶದ ಆರ್ಥಿಕ ಪ್ರಗತಿಗೆ ಬೆನ್ನೆಲುಬಾಗುತ್ತಾರೆ. ಗ್ರಾಮೀಣ ಭಾಗದಲ್ಲಿ 2 ಸಾವಿರ ಶಾಲೆಗಳನ್ನು ಸಿಎಸ್ಆರ್ ನೆರವಿನಿಂದ ನಿರ್ಮಾಣ ಮಾಡಲಾಗುವುದು. ಈ ಶಾಲೆಗಳು ಆಧುನಿಕ ಯುಗಕ್ಕೆ ತಕ್ಕಂತೆ ಇರಲಿವೆ, ಇಲ್ಲಿ ಎಲ್ಲಾ ಮೂಲಸೌಕರ್ಯಗಳು ಇರುತ್ತವೆ ಎಂದು ಮುಖ್ಯಮಂತ್ರಿ ಹೇಳಿದರು.

ಪ್ರತಿವರ್ಷ 6 ರಿಂದ 16 ವರ್ಷದೊಳಗಿನ ಮಕ್ಕಳ ಸಮೀಕ್ಷೆ ನಡೆಸಿ ಕಲಿಕೆಯಿಂದ ದೂರ ಉಳಿದ ಮಕ್ಕಳನ್ನು ಮತ್ತೆ ಕರೆ **(4ನೇ ಪುಟಕ್ಕೆ)**

## ರಸ್ತೆಗಿಳಿದು ಸುರಕ್ಷತೆ ಪರಿಶೀಲಿಸಲು ಸೂಚನೆ

ಬೆಂಗಳೂರು, ಜು. 9 - ಅಧಿಕಾರಿಗಳ ಉದಾಸೀನದಿಂದ ರಸ್ತೆ ಅಪಘಾತಗಳಲ್ಲಿ ಜನರ ಪ್ರಾಣ ಹೋದರೆ ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳು ಮತ್ತು ಉಸ್ತುವಾರಿ ಕಾರ್ಯದರ್ಶಿಗಳ ಎರಡನೇ ದಿನದ ಸಭೆಯಲ್ಲಿ ಮಾತನಾಡಿದ ಅವರು, ಅಪಘಾತ ವಲಯ ಮತ್ತು ಬ್ಲಾಕ್‌ಸ್ಪಾಟ್ ಗುರುತಿಸಿ, ಸುಮ್ಮನಾದರೆ ನಿಮ್ಮ ಜವಾ ಬ್ದಾರಿ ಮುಗಿಯುವುದಿಲ್ಲ. ರಸ್ತೆಗಿಳಿದು ಸುರಕ್ಷತೆ ಪರೀಕ್ಷಿಸಬೇಕು ಎಂದರು.

ಕಳೆದ ಒಂದು ವರ್ಷದಲ್ಲಿ 34,916 ಅಪಘಾತಗಳು ಸಂಭವಿಸಿದ್ದು, 9,943 ಜನರು ಸಾವನ್ನಪ್ಪಿದ್ದಾರೆ. **(4ನೇ ಪುಟಕ್ಕೆ)**

## ಪ್ರವಾಸೋದ್ಯಮಕ್ಕೆ ಡಿಸಿ ಮಾಸ್ಟರ್ ಪ್ಲಾನ್ : ಸಿಎಂ

ಬೆಂಗಳೂರು, ಜು. 9 - ಪ್ರವಾಸೋದ್ಯಮ ಅಭಿವೃದ್ಧಿಗೆ ಜಿಲ್ಲಾಧಿಕಾರಿಗಳು ಮಾಸ್ಟರ್ ಪ್ಲಾನ್ ಸಿದ್ಧಪಡಿಸಿದ ನಂತರ ಪ್ರತ್ಯೇಕ ನೀತಿ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯ ನಿರ್ವ ಹಣಾಧಿಕಾರಿಗಳು ಮತ್ತು ಉಸ್ತುವಾರಿ ಕಾರ್ಯದರ್ಶಿಗಳ ಎರಡನೇ ದಿನದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಪ್ರವಾಸೋ ದ್ಯಮ ಅತ್ಯಂತ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಪ್ರವಾಸಿ ತಾಣಗಳಲ್ಲಿ ಉತ್ತಮ ಪಂಚತಾರಾ ಹೋಟೆಲ್‌ಗಳು ಇಲ್ಲ. ವಿದೇಶಿ ಪ್ರವಾಸಿಗರು ಉಳಿದುಕೊಳ್ಳಲು ಗುಣಮಟ್ಟದ ಹೋಟೆಲ್‌ಗಳ ಅಗತ್ಯವಿದೆ ಎಂದರು. ಪ್ರವಾಸೋದ್ಯಮ ಅಭಿವೃದ್ಧಿಯಿಂದ ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಚಟುವಟಿಕೆಗೆ ವೇಗ ದೊರೆಯುತ್ತದೆ. **(2ನೇ ಪುಟಕ್ಕೆ)**

## ದಿವ್ಯಾಂಗ ಕಾಯ್ದೆ ಜಾರಿಗೆ ತರದ ಕೇಂದ್ರ : ತರಾಟೆ

ನವದೆಹಲಿ, ಜು. 9 - ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ದೃಷ್ಟಿ ಮಾಂದ್ಯ ಅಭ್ಯರ್ಥಿಯನ್ನು ನೇಮಿಸಿಕೊಳ್ಳುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಆದೇಶಿಸಿದೆ. ಮೂರು ತಿಂಗಳಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದೆ.

ದಿವ್ಯಾಂಗ ಕಾಯ್ದೆಯ ಅನ್ವಯ ಕ್ರಮಗಳನ್ನು ತೆಗೆದುಕೊಳ್ಳದಿರುವ ಬಗ್ಗೆ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದೇ ಇರುವ ಬಗ್ಗೆ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

1995ರ ದಿವ್ಯಾಂಗ ಕಾಯ್ದೆಯನ್ನು ಸಂಪೂರ್ಣವಾಗಿ ಜಾರಿಗೆ ತರದೆ ಇರುವುದು ಕೇಂದ್ರ ಸರ್ಕಾರದ ದೋಷವಾಗಿದೆ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಹಾಗೂ **(4ನೇ ಪುಟಕ್ಕೆ)**

# ವೈಚಾರಿಕತೆ ಹೆಸರಿನಲ್ಲಿ ಸಂಸ್ಕೃತಿ ಕಲುಷಿತ

## ಹರಿಹರದ ಕಾರ್ಯಕ್ರಮದಲ್ಲಿ ರಂಭಾಪುರಿ ಜಗದ್ಗುರುಗಳ ಅಸಮಾಧಾನ



ಹರಿಹರ, ಜು.9- ಇತ್ತೀಚಿನ ದಿನಗಳಲ್ಲಿ ಆಧುನಿಕತೆ ಮತ್ತು ವೈಚಾ ರಿಕತೆಯ ಹೆಸರಿನಲ್ಲಿ ಭಾರತೀಯ ಸಂಸ್ಕೃತಿಯನ್ನು ಕಲುಷಿತಗೊಳಿಸುವ ಕಾರ್ಯ ನಡೆಯುತ್ತಿದೆ ಎಂದು ರಂಭಾಪುರಿ ಜಗದ್ಗುರು ಶ್ರೀ ವೀರ ಸೋಮೇಶ್ವರ ಮಹಾಸ್ವಾಮಿಗಳು ಅಸಮಾಧಾನ ವ್ಯಕ್ತಪಡಿಸಿದರು.

ನಗರದ ದೇವಸ್ಥಾನ ರಸ್ತೆಯಲ್ಲಿ ರುವ ಶ್ರೀ ರೇಣುಕಾ ಮಂದಿರದಲ್ಲಿ ನಡೆದ ಆಷಾಢ ಮಾಸದ ಇಷ್ಟಲಿಂಗ ಮಹಾ ಪೂಜೆಯ ನಂತರ, ಧರ್ಮ ಸಭೆಯಲ್ಲಿ ಅವರು ಮಾತನಾಡಿದರು.

ಇಷ್ಟಲಿಂಗ ಪೂಜೆ ಮಾಡುವುದ ರಿಂದ ಮನುಷ್ಯನಿಗೆ ಮಾನಸಿಕ ನೆಮ್ಮದಿ, ಸದೃಢ ಆರೋಗ್ಯ ಹಾಗೂ ಸಮಚಿತ್ತ ಪ್ರಾಪ್ತಿ ಆಗುತ್ತದೆ. ಮನು ಷ್ಯರು ಅಧಿಕಾರ ಮತ್ತು ಹಣದ ಬೆನ್ನು ಹತ್ತಿ, ಧಾರ್ಮಿಕ ಆಚಾರ-ವಿಚಾರ ಗಳು ಬೇಡ ಎಂಬ ಪರಿಸ್ಥಿತಿಗೆ ಬಂದಿದ್ದಾರೆ. ಹಣ ಮತ್ತು ಅಧಿಕಾರದ ಹಿಂದೆ ಹೋದರೆ ಸುಖವಾಗಿ ಇರುವುದಿಲ್ಲ. ಜೊತೆಗೆ ಮಾನಸಿಕ ಶಾಂತಿ, ನೆಮ್ಮದಿ ಮರೀಚಿಕೆಯಾಗು ತ್ತದೆ. ಮನುಷ್ಯನಿಗೆ ಸಮಾಧಾನ, ಸಂತೃಪ್ತಿ ಪ್ರಾಪ್ತವಾಗಬೇಕಾದರೆ ಧರ್ಮ, ಸಂಸ್ಕೃತಿ ಮತ್ತು ಅದರ ಪರಿಪೂರ್ಣತೆಯನ್ನು ಅರಿತು ಗಟ್ಟಿ ಹೆಜ್ಜೆಗಳನ್ನು ಇಡುವಂತಾಗಬೇಕು ಎಂದು ಎಂದರು.

ವೀರಶೈವ ಧರ್ಮದಲ್ಲಿ ಗುರು ಕೊಟ್ಟಂತಹ ಇಷ್ಟಲಿಂಗ ಪೂಜೆ, ಧಾರ್ಮಿಕ ಸಂಸ್ಕಾರಕ್ಕೆ ಬಹಳಷ್ಟು ಮಹತ್ವವಿದೆ. ಸಂಸ್ಕಾರದಿಂದ ಮಾನವ ಜೀವನ ಉಜ್ವಲವಾಗಿ ಶ್ರೇಯಸ್ಸು ಕಾ ಣು ವ ಲ್ಲಿ **(4ನೇ ಪುಟಕ್ಕೆ)**

## ರಿಂದಾಬಾಯಿ ಶಿಂಧೆ ನಿಧನ



ದಾವಣಗೆರೆ ದಕ್ಷಿಣ ಮಂಡಲದ ಬಿಜೆಪಿ ಅಧ್ಯಕ್ಷರಾದ ಆನಂದ್ ರಾವ್ ಶಿಂಧೆ ಹಾಗೂ ಸುರೇಶ್ ರಾವ್ ಶಿಂಧೆ ಅವರ ಮಾತೃಶ್ರೀ

**ಶ್ರೀಮತಿ ರಿಂದಾಬಾಯಿ ಶಿಂಧೆ**

ಅವರು ದಿನಾಂಕ 9.7.2024ರ ಸಂಜೆ 6.30ಕ್ಕೆ ಅಕಾಲಿಕ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

3 ಜನ ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಇವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಬಸವರಾಜಪೇಟೆಯ ಎಚ್‌ಸಿ ಗಲ್ಲಿಯ ಅವರ ನಿವಾಸದಲ್ಲಿ ಇಡಲಾಗಿದೆ.

ಅಂತ್ಯಕ್ರಿಯೆಯನ್ನು ದಿನಾಂಕ 10.7.2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದು:ಖತಪ್ತ ಕುಟುಂಬ ವರ್ಗ**

## ವೈಕುಂಠ ಸಮಾರಾಧನೆ



**ದಿ. ಕೆ.ಟಿ. ರಾಜೇಶ್ವರರಾವ್**

ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಹೊಸಹಳ್ಳಿ ಕಾರ್ಯಸಿದ್ಧಿ ಆಂಜನೇಯ ದೇವಸ್ಥಾನ ಸಮಿತಿ ಅಧ್ಯಕ್ಷ, ಕಮ್ಮವಾರಿ ಸಂಘದ ಮಾಜಿ ಉಪಾಧ್ಯಕ್ಷ

ಕೆ.ಟಿ. ರಾಜೇಶ್ವರರಾವ್ ಅವರು ದಿನಾಂಕ : 01.07.2024ರಂದು ನಿಧನರಾಗಿದ್ದು, ಮೃತರ ಆತ್ಮಶಾಂತಿಗಾಗಿ ವೈಕುಂಠ ಸಮಾರಾಧನೆಯನ್ನು ದಿನಾಂಕ : 10.07.2024ರ ಬುಧವಾರ ಹೊಸಹಳ್ಳಿ ಕ್ಯಾಂಪ್‌ನಲ್ಲಿ ನೆರವೇರಿಸಲು ನಿಶ್ಚಯಿಸಲಾಗಿದ್ದು, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ಕಮ್ಮವಾರಿ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು, ಕಾರ್ಯಸಿದ್ಧಿ ಆಂಜನೇಯ ದೇವಸ್ಥಾನ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು, ಕುಟುಂಬ ವರ್ಗದವರು ಹಾಗೂ ಗ್ರಾಮಸ್ಥರು**




**ಹೃದಯಪೂರ್ವಕ ಕೃತಜ್ಞತೆಗಳು**



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ಪದಾಧಿಕಾರಿಗಳನ್ನಾಗಿ ನಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಲು ಮಾರ್ಗದರ್ಶನ ಮಾಡಿದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ, ಹಿರಿಯ ಶಾಸಕರೂ, ಮುತ್ಸದ್ದಿಗಳೂ, ಸಮಾಜ ಸುಧಾರಕರೂ ಆದ ಡಾ. ಶಾಮನೂರು ಶಿವಶಂಕರಪ್ಪಾಜಿ ಅವರಿಗೆ ಅನಂತ-ಅನಂತ ಕೃತಜ್ಞತೆಗಳು. ಈ ಕಾರ್ಯಕ್ಕೆ ಪ್ರೋತ್ಸಾಹ ನೀಡಿದ ಮಹಾಸಭಾದ ಎಲ್ಲಾ ಹಿರಿಯರಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಹೃದಯಪೂರ್ವಕ ಧನ್ಯವಾದಗಳು.

**ಸಿ. ಚಂದ್ರಶೇಖರ್ ಐಗೂರು,** ದಾವಣಗೆರೆ ಜಿಲ್ಲಾಧ್ಯಕ್ಷರು, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ



ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ದಾವಣಗೆರೆ. | ಕಿರುವಾಡಿ ವಿ. ಸೋಮಶೇಖರ್ ದಾವಣಗೆರೆ. | ಬಸವರಾಜಪ್ಪ ಬೆಳಗಾವಿ ದಾವಣಗೆರೆ. | ಕೆ.ಕೆ. ಮಹೇಶ್ ಕಂಚಿಕೆರೆ ದಾವಣಗೆರೆ. | ಡಿ.ಎಂ. ಶಿವಕುಮಾರ್ ಕೊರಟಿಕೆರೆ, ದಾವಣಗೆರೆ. | ಕರೇಶಿವಪ್ಪ ಆರ್. ಸಿದ್ದೇಶ್ವರಪ್ಪ ದಾವಣಗೆರೆ. | ಬುಳ್ಳಾಪುರ ವಿಶ್ವನಾಥ್ ದಾವಣಗೆರೆ. | ಡಾ. ಅಶೋಕ್ ಕುಮಾರ್ ದಾವಣಗೆರೆ.




ಬಿ.ಜೆ. ರಮೇಶ್ ದಾವಣಗೆರೆ. | ಎ.ವಿ. ಪ್ರಸಾದ್ ಅಥಣಿ ದಾವಣಗೆರೆ. | ಮಾಗಾನಹಳ್ಳಿ ಎಂ.ಜೆ. ಗಿರೀಶ್ ದಾವಣಗೆರೆ. | ಅವಿನಾಶ್ ಬಸವರಾಜ್ ದಾವಣಗೆರೆ. | ಮುಂಡಾಸ್ ವೀರೇಂದ್ರ ದಾವಣಗೆರೆ. | ಎಸ್.ಜಿ. ವೇದಮೂರ್ತಿ ಶಾಮನೂರು. | ಆರ್.ಟಿ. ಪ್ರಶಾಂತ್ ಹರಿಹರ. | ಬಿ. ಉಮೇಶ್ ಕುಮಾರ್ ಚನ್ನಗಿರಿ. | ಜೆ.ಎನ್. ಶಿವನಗೌಡ ಚನ್ನಗಿರಿ.



ಬಿ.ಓ. ಯಶೋಧ | ಎನ್.ಎಸ್. ನಿರ್ಮಲಾ | ಮಂಜುಳಾ ಕೆ.ಈ. | ಜೆ.ಎಂ. ನಾಗರತ್ನ | ನೀತಾ ನಂದೀಶ್ ಬಳ್ಳಾರಿ | ಪಲ್ಲವಿ ಪಾಟೀಲ್ | ಕೆ.ಪಿ. ರಾಜೇಶ್ವರಿ | ವಿಜಯಾ ಬಸವರಾಜ್ | ಸುಧಾ ರಾಜಣ್ಣ ಅಜ್ಜಂಪುರಶೆಟ್ರು

# ರಾಮನಗರ ಜಿಲ್ಲೆಯು ಬೆಂಗಳೂರು ದಕ್ಷಿಣವಾಗಲಿ : ಡಿಸಿಎಂ ಶಿವಕುಮಾರ್



ಬೆಂಗಳೂರು, ಜು. 9 - ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಸ್ಥಳೀಯರ ವಿರೋಧದ ನಡುವೆಯೂ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯಾಗಿ ಮರುನಾಮಕರಣ ಮಾಡಲು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಂದಾಗಿದ್ದಾರೆ.

ಜಿಲ್ಲೆಯ ಪಕ್ಷದ ಜನಪ್ರತಿನಿಧಿಗಳ ಜೊತೆಗೂಡಿ ಇಂದು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ ಶಿವಕುಮಾರ್, ರಾಮನಗರ ಜಿಲ್ಲೆಗೆ ಮರುನಾಮಕರಣ ಮಾಡುವಂತೆ ಮನವಿ ಮಾಡಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆ ಮಾಡುವುದರಿಂದ ಆಸ್ತಿ ಮೌಲ್ಯ ಹೆಚ್ಚುತ್ತದೆ. ಮೈಸೂರುವರೆಗೂ ಅಭಿವೃದ್ಧಿ ಸಾಧಿಸಲು, ಕೈಗಾರಿಕೆಗಳ ಸ್ಥಾಪನೆಗೆ ಸಹಕಾರಿ ಆಗುತ್ತದೆ ಎಂದು ನಿಯೋಗ ಮುಖ್ಯಮಂತ್ರಿ ಅವರಿಗೆ ಮನವರಿಕೆ ಮಾಡಿಕೊಟ್ಟಿದೆ.

ಬೆಂಗಳೂರಿನ ಒಂದು ದಿಕ್ಕಿನಲ್ಲಿ ಆಂಧ್ರ ಪ್ರದೇಶ, ಮತ್ತೊಂದು ದಿಕ್ಕಿನಲ್ಲಿ ತಮಿಳುನಾಡು ರಾಜ್ಯಗಳ ಗಡಿ ಬರುತ್ತದೆ. ಹೀಗಾಗಿ ಬೆಂಗಳೂರಿನ ವಿಸ್ತರಣೆಗೆ ನಮಗೆ ಉಳಿದಿರುವುದು ತುಮಕೂರು ಮತ್ತು ರಾಮನಗರ ಭಾಗವಷ್ಟೆ. ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ, ಹಾರೋಹಳ್ಳಿ ತಾಲ್ಲೂಕುಗಳ ಭವಿಷ್ಯ ಹಾಗೂ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಬೇಕು.

ಬೆಂಗಳೂರು ನಗರ ಸೇರಿದಂತೆ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿ ಸೇರಿದಂತೆ ನಾವೆಲ್ಲರೂ ಮೂಲತಃ ಬೆಂಗಳೂರು ಜಿಲ್ಲೆಯವರು. ಆಡಳಿತಾತ್ಮಕ ದೃಷ್ಟಿಯಿಂದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಎಂದು ಹಿಂದೆ ವಿಭಾಗ ಮಾಡಲಾಯಿತು.

ರಾಮನಗರವನ್ನು ಕೇಂದ್ರಾಡಳಿತವಾಗಿಟ್ಟುಕೊಂಡೇ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡುವುದು ಅಗತ್ಯ. ಬೆಂಗಳೂರು ಜಾಗತಿಕ ಮನ್ನಣೆ ಹೊಂದಿದ್ದು, ಈ ಜಿಲ್ಲೆಯ ಹೆಸರು ಉಳಿಸಿಕೊಳ್ಳಲು ನನ್ನ ಮುಖಂಡತ್ವದಲ್ಲಿ ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ಶಿವಕುಮಾರ್ ಹೇಳಿದ್ದಾರೆ. ನಾವು ಯಾವುದೇ ಹೊಸ ಜಿಲ್ಲೆ ಮಾಡುತ್ತಿಲ್ಲ, ಇರುವ ಜಿಲ್ಲೆ ಹಾಗೇ ಇರಲಿದೆ. ರಾಮನಗರ, ಚನ್ನಪಟ್ಟಣ, ಮಾಗಡಿ, ಹಾರೋಹಳ್ಳಿ, ಕನಕಪುರ ತಾಲ್ಲೂಕುಗಳನ್ನು ಒಳಗೊಂಡು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣಕ್ಕೆ ಮುಂದಾಗಿದ್ದೇವೆ ಎಂದರು.

# ಪರಿಶಿಷ್ಟರ ಹಣ ಬೇರೆ ಯೋಜನೆಗೆ ಬಳಕೆ, ರಾಜ್ಯಕ್ಕೆ ವಿವರ ಕೇಳಿದ ಆಯೋಗ

ನವದೆಹಲಿ, ಜು. 9 - ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ಇರಿಸಲಾಗಿದ್ದ ಹಣವನ್ನು ಬೇರೆ ಯೋಜನೆಗಳಿಗೆ ಬಳಸಿದ ಆರೋಪಕ್ಕೆ ಸಂಬಂಧಿಸಿದಂತೆ ವಿವರವಾದ ವರದಿ ನೀಡುವಂತೆ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ ರಾಜ್ಯ ಸರ್ಕಾರಕ್ಕೆ ಕೇಳಿದೆ.

ಮಾಧ್ಯಮಗಳ ವರದಿಯ ನಂತರ ಆಯೋಗವು ಆರೋಪದ ಬಗ್ಗೆ ಸ್ವಯಂ ಪ್ರೇರಿತವಾಗಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದೆ.

ಕರ್ನಾಟಕ ಸರ್ಕಾರ ಐದು ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿಯಲ್ಲಿ ಮೀಸಲಿಟ್ಟ 14,730 ಕೋಟಿ ರೂ.ಗಳನ್ನು ಮರುಹಂಚಿಕೆ ಮಾಡಲು ನಿರ್ಧರಿಸಿದೆ ಎಂದು ವರದಿಯಾಗಿತ್ತು.

# ಎನ್‌ಟಿಎ, ನೀಟ್ ಪರೀಕ್ಷೆ ಅವ್ಯವಹಾರ ತನಿಖೆಗೆ ಆಗ್ರಹ



## ರಾಣೇಬೆನ್ನೂರಿನಲ್ಲಿ ಎನ್‌ಎಸ್‌ಯುಐ ಪ್ರತಿಭಟನೆ

ರಾಣೇಬೆನ್ನೂರು, ಜು. 9- ಎನ್‌ಟಿಎ ಹಾಗೂ ನೀಟ್ ಪರೀಕ್ಷೆಯ ಅವ್ಯವಹಾರದ ಬಗ್ಗೆ ಪಾರದರ್ಶಕತೆ ಮತ್ತು ನಿಷ್ಪಕ್ಷಪಾತದಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿ, ಎನ್‌ಎಸ್‌ಯುಐ ನೇತೃತ್ವದಲ್ಲಿ ಕಾಲೇಜು ವಿದ್ಯಾರ್ಥಿಗಳು ಮಂಗಳವಾರ ನಗರದ ಬಸ್‌ನಿಲ್ದಾಣದ ಬಳಿ ಮಾನವ ಸರಪಳಿ ರಚಿಸಿ, ಪ್ರತಿಭಟನೆ ನಡೆಸಿದರು.

ಶಾಸಕ ಪ್ರಕಾಶ ಕೋಳಿವಾಡ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿ, ಜೂನ್ ತಿಂಗಳಿನಲ್ಲಿ ನಡೆದ ನೀಟ್ ಪಿಜಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಎನ್‌ಟಿಎ ಫಲಿತಾಂಶದಲ್ಲಿನ ನಡವಳಿಕೆಯ ಹಾಗೂ ಪರೀಕ್ಷೆಗಳನ್ನು ನಡೆಸುವ ಬಗ್ಗೆ, ಪಾರದರ್ಶಕತೆ ಪ್ರಶ್ನಿಸುವ ಹಲವಾರು ದೂರುಗಳು ದೇಶಾದ್ಯಂತ ಬರುತ್ತಿವೆ. ಎನ್‌ಟಿಎ ಜಾರಿಗೆ ಬಂದಾಗಿನಿಂದ ಪ್ರಮುಖ ಪರೀಕ್ಷೆಗಳಲ್ಲಿ ಗಂಭೀರ ಅವ್ಯವಹಾರಗಳು ಮುಂದುವರಿಕೆಯಾಗಿ ಇದು ಸಂಭವಿಸಿದೆ. ಪರಿಣಾಮವಾಗಿ, ಅಂತಹ ಎನ್‌ಟಿಎ ಸಂಸ್ಥೆಯು ಪ್ರವೇಶವನ್ನು ನಡೆಸಲು ಅಸಮರ್ಥ ಮತ್ತು ಅನರ್ಹವಾಗಿದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ ಎಂದರು.

ಎಂಬಿಬಿಎಸ್, ಬಿಡಿಎಸ್ ಪದವಿ ಹಂತದ ಪ್ರವೇಶ ಪರೀಕ್ಷೆಯಲ್ಲಿ ಒಟ್ಟು ಅಂಕಗಳು 70, ಪ್ರತಿ ಸರಿಯಾದ ಉತ್ತರಕ್ಕೆ 4 ಅಂಕಗಳನ್ನು ನೀಡಲಾಗುತ್ತದೆ, ಆದರೆ ಪ್ರತಿ ತಪ್ಪು ಉತ್ತರಕ್ಕೆ 1 ಅಂಕವನ್ನು ಕಡಿತಗೊಳಿಸಲಾಗುತ್ತದೆ, ಆದರೆ ಉತ್ತರಿಸದ ಪ್ರಶ್ನೆಗಳನ್ನು ಗುರುತಿಸಿಲ್ಲ. ಆ ಸಂದರ್ಭದಲ್ಲಿ, ಗಣಿತದ ಪ್ರಕಾರ 719 ಮತ್ತು 718 ನಂತಹ ಅಂಕಗಳನ್ನು ಪಡೆಯಲು ಸಾಧ್ಯವಿಲ್ಲ. ಆದರೆ ಅಂತಹ ಪ್ರಕರಣಗಳು ಬಂದಿರುವ ಫಲಿತಾಂಶಗಳಲ್ಲಿ ಕಂಡುಬರುತ್ತಿವೆ. ಈ ವರ್ಷದ ಫಲಿತಾಂಶವು ಗ್ರೇಸ್ ಮಾರ್ಕಿಂಗ್‌ಗಾಗಿ ಎಂದು ಎನ್‌ಟಿಎ ಪ್ರಾಸಂಗಿಕವಾಗಿ ಹೇಳಿಕೆಯಲ್ಲಿ ತಿಳಿಸಿದೆ. ಆದರೆ ಈ ವರ್ಷ ಪರೀಕ್ಷೆಗೆ ಮುನ್ನ ಎನ್‌ಟಿಎ ಪ್ರಕಟಿಸಿದ ಮಾರ್ಗಸೂಚಿಗಳಲ್ಲಿ ಎಲ್ಲಿಯೂ ಈ ಗ್ರೇಸ್ ಮಾರ್ಕಿಂಗ್ ಯೋಜನೆಯ ಬಗ್ಗೆ ಉಲ್ಲೇಖಿಸಿಲ್ಲ. ಇದಲ್ಲದೆ, ಒಂದೇ ಕೇಂದ್ರ ಸತತ ರೋಲ್ ಸಂಖ್ಯೆ ಹೊಂದಿರುವ ಹಲವು ವಿದ್ಯಾರ್ಥಿಗಳು 720 ಕ್ಕೆ 720 ಅಂಕಗಳನ್ನು ಪಡೆದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿವೆ ಎಂದು ಹೇಳಿದರು.

ಆ ವಿದ್ಯಾರ್ಥಿಗಳು ಖಾಸಗಿ ಕೋಚಿಂಗ್ ಕೇಂದ್ರಗಳಿಗೆ ಸೇರಿದ ವಿದ್ಯಾರ್ಥಿಗಳಾಗಿದ್ದಾರೆ. ಹಾಗೆಯೇ ದೊಡ್ಡ ವಿದ್ಯಾರ್ಥಿ ಸಮುದಾಯವು ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಇದು ಒತ್ತಾಯಿಸುತ್ತಿದೆ. ಕೇಂದ್ರದ ಸರ್ಕಾರ ವೈದ್ಯಕೀಯ ಶಿಕ್ಷಣದ ಪಠ್ಯಕ್ರಮದಲ್ಲಿ ಗಮನಾರ್ಹವಾದ ಕಡಿತ ಮಾಡುತ್ತಾ, ಕಾಲೇಜು ಶುಲ್ಕಗಳನ್ನು ಹೆಚ್ಚಿಸುತ್ತಾ ಹಣವುಳ್ಳವರಿಗೆ ಮಾತ್ರ ವೈದ್ಯಕೀಯ ಶಿಕ್ಷಣ ಎಂಬ ಖಾಸಗೀಕರಣ ನೀತಿಗಳನ್ನು ಎನ್‌ಎಂಸಿ ಮತ್ತು ಎನ್‌ಟಿಎ ಸಂಸ್ಥೆಗಳು ಜಂಟಿಯಾಗಿ ಪ್ರೋತ್ಸಾಹಿಸುತ್ತಿವೆ. ಇದು ದೇಶದ ಭವಿಷ್ಯಕ್ಕೆ ತುಂಬಾ ಅಪಾಯಕಾರಿಯಾಗಿದೆ ಎಂದು ದೂರಿದರು.

ಈಗ ನೀಟ್ ಪಿಜಿಗೆ ಸಂಬಂಧಿಸಿದಂತೆಯೂ ಇದೇ ಆರೋಪ ಕೇಳಿಬರುತ್ತಿದೆ. ಆದ್ದರಿಂದ ಈ ಘಟನೆಗೆ ಸಂಬಂಧಿಸಿದಂತೆ ಕೂಡಲೇ ಪಾರದರ್ಶಕ ಮತ್ತು ನಿಷ್ಪಕ್ಷಪಾತ ತನಿಖೆಯನ್ನು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ಮಾಡಬೇಕು ಎಂದು ಆಗ್ರಹಿಸಿದರು.

ಎನ್‌ಎಸ್‌ಯುಐ ತಾಲೂಕು ಅಧ್ಯಕ್ಷ ಅರುಣಕುಮಾರ ಎಚ್., ಉಪಾಧ್ಯಕ್ಷ ರಾಘವೇಂದ್ರ ಹಾಗೂ ವಿದ್ಯಾರ್ಥಿಗಳಾದ ಯುವರಾಜ ದೀಪಾವಳಿ, ಶ್ರೀಕಂಠ ಟಿ.ಎಚ್., ಕೇಶವ ಎನ್.ಬಿ., ಗಗನ ಡಿ., ಆದರ್ಶ ಎ, ಪವನ ಎಮ್, ಮಹೇಶ ಡಿ, ಹರೀಶ ಪಾಟೀಲ, ಹರೀಶ ಕೇಲಕರ, ಚಂದ್ರ ಕಮ್ಮಾರ, ವಿಜಯ ಪರಾಶಿ, ಗಣೇಶ ಹಾಲಬಾವಿ, ಉದಯ ಜಿ, ತೇಜು ಸಪ್ಪಾಳಿ, ಸ್ವರೂಪ, ದರ್ಶನ ಕುಂದೂರ ಮತ್ತಿತರರಿದ್ದರು.

# '108 ತುರ್ತು ಆಂಬ್ಯುಲೆನ್ಸ್' ವಾಹನಕ್ಕೆ ಶಾಸಕ ಬಸವಂತಪ್ಪ ಚಾಲನೆ



## ಮಾಯಕೊಂಡ

ಮಾಯಕೊಂಡ, ಜು.9- ಬಡವರು ಮತ್ತು ನಿರ್ಗತಿಕ ರೋಗಿಗಳಿಗೆ 108 ತುರ್ತು ಸೇವೆಯ ಆಂಬ್ಯುಲೆನ್ಸ್ ವಾಹನವು ಅವಶ್ಯಕವಾಗಿದ್ದು, ಹೊಸ ವಾಹನ ಸದ್ಬಳಕೆಯಾಗಬೇಕೆಂದು ಶಾಸಕ ಕೆ.ಎಸ್.ಬಸವಂತಪ್ಪ ಹೇಳಿದರು.

ಕ್ಷೇತ್ರದ ವ್ಯಾಪ್ತಿಯ ಬಸವಾಪಟ್ಟಣದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಈಚೆಗೆ ಹೊಸ ಆಂಬ್ಯುಲೆನ್ಸ್ ವಾಹನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವೈದ್ಯಕೀಯ ಸೇವೆಗಳ ತುರ್ತು ಅಗತ್ಯ ಚಿಕಿತ್ಸೆಯ ತೊಡಕುಗಳನ್ನು ಕಡಿಮೆ ಮಾಡಲು ಮತ್ತು ರೋಗಿಯು ಬದುಕುಳಿಯುವ ಸಾಧ್ಯತೆಗಳನ್ನು ಹೆಚ್ಚಿಸಲು ಆಮ್ಲಜನಕ ಚಿಕಿತ್ಸೆ, ಸುಧಾರಿತ ಔಷಧ ಮತ್ತು ಗರಿಷ್ಠ ಸಮಯದ ಬಳಕೆಗಾಗಿ ತುರ್ತು ವಾಹನ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ತುರ್ತು ಸಂದರ್ಭಗಳಲ್ಲಿ ಈ ವಾಹನ ಬಳಸಿ ಸೌಲಭ್ಯ ಕಲ್ಪಿಸುವತ್ತ ಆಸ್ಪತ್ರೆಯ ವೈದ್ಯಾಧಿಕಾರಿಗಳು ಗಮನ ಹರಿಸಬೇಕೆಂದರು.

ತಹಶೀಲ್ದಾರ್ ಪಿ.ಎಸ್. ಎರ್ರಿಸ್ವಾಮಿ ಮಾತನಾಡಿ, ಈ ತುರ್ತು ಆಂಬ್ಯುಲೆನ್ಸ್ ಸೇವೆಯು 24/7 ನಿರಂತರ ಉಚಿತ ಸೇವೆಯಾಗಿದ್ದು, ಯಾವುದೇ ತುರ್ತು ಸಂದರ್ಭದಲ್ಲಿ 108 ಸಂಖ್ಯೆಗೆ ಡಯಲ್ ಮಾಡುವ ಮೂಲಕ ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಬಿ.ಜಿ.ಸಚಿನ್, ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ.ನಾಗರಾಜ್, ಗ್ರಾಪಂ ಸದಸ್ಯರಾದ ಸೈಯದ್ ಹಿದಾಯಿತ್, ಹರೋಸಾಗರ ಎ.ಕೆ.ಗಿರೀಶ್, ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ಇ.ಸತ್ಯ ಸುಂದರ, ಮುಖಂಡರಾದ ಜಿ.ಪ್ರಕಾಶ್, ಬಿ. ಮಾರುತಿ, ಆಂಬ್ಯುಲೆನ್ಸ್ ಸ್ಟಾಫ್ ನರ್ಸ್ ವಿ.ರಾಮಕೃಷ್ಣ, ಚಾಲಕರಾದ ಎಂ. ಹಾಲೇಶ್, ಆರ್.ದುರ್ಗೇಶ್ ಸೇರಿದಂತೆ, ಗ್ರಾಮಸ್ಥರು ಹಾಜರಿದ್ದರು.

# ನಗರದ ಎಸ್‌ಬಿಸಿ ಕಾಲೇಜಿನಲ್ಲಿ ಇಂದು ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು (ಎಸ್‌ಬಿಸಿ) ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದ 2023-24ನೇ ಸಾಲಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಘದ ವಾರ್ಷಿಕೋತ್ಸವ, ಸಾಂಸ್ಕೃತಿಕ, ಕ್ರೀಡಾ, ಎನ್ನೆಸ್ಸೆಸ್ ಘಟಕ ಹಾಗೂ ರೆಡ್‌ಕ್ರಾಸ್ ಘಟಕದ ಸಮಾರೋಪ ಸಮಾರಂಭವು ಇಂದು ಬೆಳಿಗ್ಗೆ 10.30ಕ್ಕೆ ಕಾಲೇಜಿನ ಸಭಾಂಗಣದಲ್ಲಿ ನೆರವೇರಲಿದೆ.

ಎಸ್.ಬಿ.ಸಿ. ಪ್ರಥಮ ದರ್ಜೆ ಕಾಲೇಜಿನ ಅಧ್ಯಕ್ಷ ಬಿ.ಸಿ. ಉಮಾಪತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಕುಲಸಚಿವ ಡಾ. ಸಿ.ಕೆ. ರಮೇಶ್, ಮಾಗನೂರು ಬಸಪ್ಪ ಪದವಿ ಪೂರ್ವ ವಿಜ್ಞಾನ ಕಾಲೇಜಿನ ನಿರ್ದೇಶಕ ಡಾ. ಜಿ.ಎನ್.ಹೆಚ್. ಕುಮಾರ್, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿ ಅಥಣಿ ಪ್ರಶಾಂತ್ ಅವರು ಉಪಸ್ಥಿತರಿರುವರು.

ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ

# ಡ್ರೈವರ್ ಬಸವರಾಜಪ್ಪ ಜವಳಿ ನಿಧನ



2ನೇ ಮೇನ್, 5ನೇ ಕ್ರಾಸ್, ವಿಜಯನಗರ ಬಡಾವಣೆ, ದಾವಣಗೆರೆ ವಾಸಿಯಾದ

**ಡ್ರೈವರ್ ಬಸವರಾಜ ಜವಳಿ**

(75 ವರ್ಷ) ಇವರು ದಿನಾಂಕ : 9.7.2024ರ ಮಂಗಳವಾರ ಮಧ್ಯಾಹ್ನ 12.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಪತ್ನಿ, ಓರ್ವ ಪುತ್ರ, ನಾಲ್ಕು ಜನ ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 10.7.2024ರ ಬುಧವಾರ ಬೆಳಗ್ಗೆ 10 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ :**

ಫೋ. : 9606679076, 7829933185

# ಡೆಂಗ್ಯೂ ಮಾರಣಾಂತಿಕ ರೋಗವಲ್ಲ : ಮುಂಜಾಗ್ರತಾ ಕ್ರಮ ಅಗತ್ಯ



## ಹೊನ್ನಾಳಿ ತಾಲ್ಲೂಕು ಪ್ರಭಾರಿ ಆರೋಗ್ಯ ವೈದ್ಯಾಧಿಕಾರಿ ಡಾ.ಎನ್.ಹೆಚ್.ಗಿರೀಶ್ ಕಳಕಳಿ

ಸಾಸ್ವೆಹಳ್ಳಿ, ಜು.9- ಡೆಂಗ್ಯೂ ಮಾರಣಾಂತಿಕ ರೋಗವಲ್ಲ. 2 ದಿನಕ್ಕಿಂತ ಹೆಚ್ಚು ಕಾಲ ಜ್ವರ ಇದ್ದರೆ ಸಾರ್ವಜನಿಕರು ನಿರ್ಲಕ್ಷಿಸಿದೇ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವಂತೆ ಪ್ರಭಾರಿ ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿ ಡಾ.ಎನ್.ಹೆಚ್. ಗಿರೀಶ್ ಮನವಿ ಮಾಡಿದರು.

ಅವರು ಡೆಂಗ್ಯೂ ಜ್ವರದ ಬಗ್ಗೆ ಪತ್ರಿಕೆಗೆ ಮಾಹಿತಿ ನೀಡಿ ಮಾತನಾಡಿದರು. ಸರ್ಕಾರದ ಸೂಚನೆ ಮೇರೆಗೆ ಹೆಚ್ಚು ಶಂಕಿತರ ರಕ್ತ ತಪಾಸಣೆ ಮಾಡಿದ ಸಂದರ್ಭದಲ್ಲಿ ಹೆಚ್ಚಿನ ಡೆಂಗ್ಯೂ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿವೆ ಎಂದು ತಿಳಿಸಿದರು.

ಜನವರಿಯಿಂದ ಇಲ್ಲಿಯವರೆಗೆ ಶಂಕಿತರ ರಕ್ತವನ್ನು ಸಂಗ್ರಹಿಸಿ, ಜಿಲ್ಲಾ ಮಟ್ಟದ ಪ್ರಯೋಗ ಶಾಲೆಯಲ್ಲಿ ತಪಾಸಣೆಗೊಳಪಡಿಸಿದ್ದಕ್ಕೆ ಒಟ್ಟು 63 ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿದ್ದು, ಡೆಂಗ್ಯೂ ಜ್ವರದಿಂದ ಹನುಮನಹಳ್ಳಿಯ ಪಿಯು ವಿದ್ಯಾರ್ಥಿನಿ ಅನುಷಾ ಮೃತಪಟ್ಟಿದ್ದು ಬಿಟ್ಟರೇ, ಯಾವುದೇ ಜೀವ ಹಾನಿಯಾಗಿರುವುದಿಲ್ಲವೆಂದು ಮಾಹಿತಿ ನೀಡಿದರು.

ಆರೋಗ್ಯ ಇಲಾಖೆಯ ವತಿಯಿಂದ ಕಳೆದ ವರ್ಷ ವಿಜ್ಞಾನ ವಿಭಾಗದ ಶಿಕ್ಷಕರಿಗೆ ಮುಂಜಾಗ್ರತಾ ಕ್ರಮವಾಗಿ ಡೆಂಗ್ಯೂ ಜ್ವರದ ಬಗ್ಗೆ ಮಾಹಿತಿ ನೀಡಲಾಗಿದ್ದು, ಆರೋಗ್ಯ ಇಲಾಖೆಯ ವತಿಯಿಂದ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಆಶಾ ಕಾರ್ಯಕರ್ತೆಯರು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ಡೆಂಗ್ಯೂ ನಿಯಂತ್ರಣಕ್ಕೆ ಶ್ರಮಿಸುತ್ತಿದ್ದು, ಸಾರ್ವಜನಿಕರು ಅವರ ಸಲಹೆ - ಸೂಚನೆಗಳನ್ನು ಪಾಲಿಸುವಂತೆ ವಿನಂತಿಸಿದರು.

ಜಿಲ್ಲಾ ಮಟ್ಟದ ಪ್ರಯೋಗ ಶಾಲೆಯ ಫಲಿತಾಂಶ ಬಂದಿದ್ದು, ಜುಲೈ 9ರ ಮಂಗಳವಾರದಂದು ಗೊಲ್ಲರಹಳ್ಳಿ - 1, ನರಸಗೊಂಡನಹಳ್ಳಿ - 1, ಕುಂದೂರು - 1, ಹರಳಹಳ್ಳಿ - 1, ಹತ್ತೂರು - 1, ಅರಬಗಟ್ಟೆ - 1, ಬೇಲಿಮಲ್ಲೂರು - 1, ಹೊನ್ನಾಳಿ ಪಟ್ಟಣ - 2 ಈ ದಿನ ಒಟ್ಟು 9 ಡೆಂಗ್ಯೂ ಬಂದಿರುವುದು ದೃಢಪಟ್ಟಿದೆ ಎಂದು ತಿಳಿಸಿದರು.

ಮಳೆಗಾಲ ಪ್ರಾರಂಭವಾಗುತ್ತಿದ್ದು, ಡೆಂಗ್ಯೂ, ಚಿಕನ್ ಗುನ್ಯಾ ಮತ್ತಿತರೆ ರೋಗಗಳ ಪ್ರಕರಣಗಳು ಹೆಚ್ಚುತ್ತಿದ್ದು, ಪ್ರತೀ ಗ್ರಾ.ಪಂ.ಗಳ ಅಧಿಕಾರಿಗಳು ಗ್ರಾಮದ ಜನತೆಯನ್ನು ರಕ್ಷಿಸುವಲ್ಲಿ ಪಂಚಾಯ್ತಿಗಳ ಸಹಕಾರ ಆರೋಗ್ಯ ಇಲಾಖೆಗೆ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ಗ್ರಾಮಗಳಲ್ಲಿ ಚರಂಡಿ ನೀರು ನಿಲ್ಲದಂತೆ ಸರಾಗವಾಗಿ ಹರಿದುಹೋಗುವಂತೆ ಚರಂಡಿಗಳನ್ನು ಸ್ವಚ್ಛಗೊಳಿಸಿ ಹಾಗೂ ಕೀಟನಾಶಕಗಳ ಸಿಂಪಡಣೆ ಮಾಡಬೇಕು. ಕುಡಿಯುವ ನೀರಿನ ಪೈಪ್‌ಲೈನ್ ಸೋರಿಕೆಯಾಗುತ್ತಿದ್ದರೆ, ಅವುಗಳ ದುರಸ್ತಿಗೆ ಕ್ರಮ ಕೈಗೊಳ್ಳಬೇಕು. ಗ್ರಾಮದಲ್ಲಿನ ಅಂಗಡಿ ಮತ್ತು ಹೋಟೆಲ್‌ಗಳಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸೂಚನೆ ನೀಡಬೇಕು.

ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ಗರಿಷ್ಠ 20 ದಿನಗಳಿಗೊಮ್ಮೆ ಸ್ವಚ್ಛಗೊಳಿಸಿ, ಕ್ಲೋರಿನೇಶನ್ ಮಾಡಿಸಬೇಕು.

ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸುಸ್ಥಿತಿಯಲ್ಲಿರಿಸಬೇಕು, ಕಸವನ್ನು ಎಲ್ಲೆಂದರಲ್ಲಿ ಬಿಸಾಕಲು ಬಿಡದೇ ಘನ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಹಾಕುವ ವ್ಯವಸ್ಥೆಯಾಗಬೇಕು ಮತ್ತು ಮುಂಜಾಗ್ರತಾ ಕ್ರಮಗಳ ಬಗ್ಗೆ ಕಸ ಸಂಗ್ರಹಿಸುವ ವಾಹನಗಳಲ್ಲಿ ಧ್ವನಿವರ್ಧಕದ ಮೂಲಕ ಪ್ರಚಾರ ಪಡಿಸಿ, ಜನರ ಆರೋಗ್ಯ ರಕ್ಷಣೆಗೆ ಮುಂದಾಗಬೇಕೆಂದು ಅವರು ಮನವಿ ಮಾಡಿದರು.

# ಪದ್ಮಸಾಲಿ ಯುವಕ ಸಂಘದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜು.9- ಇದೇ ದಿನಾಂಕ 28ರಂದು ಶ್ರೀ ಮಾರ್ಕಂಡೇಶ್ವರ ಪದ್ಮಸಾಲಿ (ನೇಕಾರ) ಯುವಕ ಸಂಘದಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚಿನ ಅಂಕ ಗಳಿಸಿದ ಪದ್ಮಸಾಲಿ (ನೇಕಾರ) ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಶ್ರೀನಿವಾಸ್ ಪಿ.ಜಿ. ತಿಳಿಸಿದರು.

ಮಂಗಳವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಎಸ್‌ಕೆಪಿ ರಸ್ತೆ ಮಾರ್ಕಂಡೇಶ್ವರ ಸಮುದಾಯ ಭವನದಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಅಂದು ಬೆಳಿಗ್ಗೆ 10ರಿಂದ 12 ಗಂಟೆವರೆಗೆ 5ರಿಂದ 14 ವರ್ಷದೊಳಗಿನ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ, ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿದೆ. ಮಧ್ಯಾಹ್ನ 2ರಿಂದ 3 ಗಂಟೆವರೆಗೆ ಪ್ರೇರಣಾ ತರಗತಿ ನಡೆಯಲಿದೆ. ಸಂಜೆ 4 ಗಂಟೆಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ.

ಪ್ರತಿಭಾ ಪುರಸ್ಕಾರಕ್ಕೆ ಹೆಸರು ನೋಂದಾಯಿಸಲು ಸಂಘದ ಅಧ್ಯಕ್ಷ ಶ್ರೀನಿವಾಸ್ ಪಿ.ಜಿ. (9886614722), ಪ್ರಧಾನ ಕಾರ್ಯದರ್ಶಿ ಸೇಪೂರ್ ಆನಂದ್ (9900956880) ಅವರನ್ನು ಸಂಪರ್ಕಿಸಬಹುದು. ಹೆಸರು ನೋಂದಾಯಿಸಲು ಇದೇ ದಿನಾಂಕ 15 ಕೊನೆಯ ದಿನವಾಗಿದೆ ಎಂದರು.

ಸಂಘಟನೆಯ ಪ್ರಮುಖರಾದ ಶ್ರೀನಿವಾಸ್ ಡಿ.ಎಸ್. ಮಾರ್ಕಂಡೇಯ ನರಾಲ್, ಪಿ. ರುದ್ರೇಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

# ಕೈಲಾಸ ಶಿವಗಣಾರಾಧನೆ ಆಹ್ವಾನ







ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ ವಾಸಿ,

**ಬಸೆಟಪ್ಪ ಲಿಂಗೈಕ್ಯ ಶ್ರೀ ಹಾಲಪ್ಪ ಲಿಂಗೈಕ್ಯ ಶ್ರೀಮತಿ ಶಾಂತಮ್ಮ**

ಇವರ ಮೊಮ್ಮಗನಾದ **ಶ್ರೀ ಬಿ.ಪಿ. ಆಂಜನೇಯ**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 2.7.2024ನೇ ಮಂಗಳವಾರ ಬೆಳಿಗ್ಗೆ 10.15ಕ್ಕೆ ನನ್ನ ಪೂಜ್ಯ ತಂದೆಯವರಾದ

**ಶರಣ ಬಸೆಟಪ್ಪ ಪ್ರಭುದೇವ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಶಿವಗಣಾರಾಧನೆ "ಯನ್ನು**

**ದಿನಾಂಕ : 10.7.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಕುಂಬಳೂರು ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು : **ಬಸೆಟಪ್ಪ ಲಿಂ. ಶಾಂತಮ್ಮ ಲಿಂ. ಹಾಲಪ್ಪ ಇವರ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಬಸೆಟಪ್ಪ ವಂಶಸ್ಥರು ಮತ್ತು ಕುಂಬಳೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



# ಜನಮನ ಜಾಗೃತಿಗೆ ಧರ್ಮ - ಧರ್ಮಾಚರಣೆ ಬೇಕು

## ಹರಿಹರದಲ್ಲಿನ ರಂಭಾಪುರಿ ಜಗದ್ಗುರುಗಳ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್

ಹರಿಹರ, ಜು. 9 - ಅಸತ್ಯದಿಂದ ಸತ್ಯ ಸಾಕ್ಷಾತ್ಕಾರದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಸಾವಿನಿಂದ ಸಾವಿಲ್ಲದೆಡೆಗೆ ಸಾಗುವುದೇ ಜೀವನದ ಗುರಿಯಾದಾಗ ಬದುಕು ಸಾರ್ಥಕಗೊಳ್ಳುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ ಹಳೇಪೇಟೆ ಶ್ರೀ ಬಸವೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಆಷಾಢ ಮಾಸದ ಅಂಗವಾಗಿ ಇಂದು ಸಂಜೆ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಮನುಷ್ಯ ತಿಳಿದಿರುವುದಕ್ಕಿಂತ ತಿಳಿಯಬೇಕಾದುದು ಬಹಳಷ್ಟಿದೆ. ಮಾನವನ ಮನಸ್ಸು, ಬುದ್ಧಿ ಮತ್ತು ಸದ್ವಿಚಾರಗಳು ಸರಿಯಾಗಿ ಬೆಳೆದಾಗ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ. ಸಿಹಿ-ಕಹಿಗಳ ಸಂಗಮ ಮಾನವ ಜೀವನ. ನ್ಯಾಯ ನೀತಿಗಳು ನಟನೆಯಾಗಿರದೇ ನೈಜ ನಡೆಯಲ್ಲಿ ಬರಬೇಕು. ನಿರ್ಭಯದಿಂದ ಬದುಕುವುದೇ ನಿಜವಾದ ಬದುಕು. ಸತ್ಯ-ಶಾಂತಿ ಎಲ್ಲರ ಬಾಳಿಗೂ ಅಗತ್ಯ. ವೀರಶೈವ ಧರ್ಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಕೊಟ್ಟ ತತ್ವ ಸಿದ್ಧಾಂತಗಳು ಜೀವನ ವಿಕಾಸಕ್ಕೆ ಅಡಿಪಾಯವಾಗಿವೆ. ಸ್ವಧರ್ಮ, ನಿಷ್ಠೆ ಮತ್ತು ಪರಧರ್ಮ ಸಹಿಷ್ಣುತೆ ಅಳವಡಿಸಿಕೊಂಡು ಸಾಮರಸ್ಯ ಸೌಹಾರ್ದತೆಯ ಬದುಕು ಕಟ್ಟಿಕೊಳ್ಳಬೇಕೆಂದರು.

ಸಮಾರಂಭವನ್ನು ಉದ್ಘಾಟಿಸಿದ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಜನಮನವನ್ನು ಜಾಗೃತಗೊಳಿಸಲು ಧರ್ಮ ಮತ್ತು ಧರ್ಮಾಚರಣೆ ಬೇಕು. ಶ್ರೀ ಗುರುವಿನ ಮಾರ್ಗದರ್ಶನ ಜೀವನದ ಉನ್ನತಿಗೆ ಅವಶ್ಯಕ. ಪ್ರಾಪಂಚಿಕ ಸಂಬಂಧಗಳು ಕಾಲಾಂತರದಲ್ಲಿ ಶಿಥಿಲಗೊಳ್ಳಬಹುದು. ಆದರೆ ಗುರು-ಶಿಷ್ಯರ ಸಂಬಂಧ ಹಾಗಲ್ಲ. ಅದು ಚಿರಂತನ ಮತ್ತು ನಿತ್ಯ ನೂತನ. ಶ್ರೀ ರಂಭಾಪುರಿ ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ದೇವಸ್ಥಾನ ಅಭಿವೃದ್ಧಿಗೊಳ್ಳುತ್ತಿರುವುದು ಎಲ್ಲರಿಗೂ ಸಂತೋಷ ತಂದಿದೆ. ಶಾಸಕರ ಅನುದಾನದಲ್ಲಿ ಅಭಿವೃದ್ಧಿಗಾಗಿ ಸಹಕರಿಸುವುದಾಗಿ ಭರವಸೆಯಿಟ್ಟರು.

ನೇತೃತ್ವ ವಹಿಸಿದ್ದ ಮಳಲಿ ಸಂಸ್ಥಾನ ಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಅಂತರಂಗದ ಅಂಧಕಾರ ಕಳೆಯಲು ಗುರುವೊಬ್ಬನೇ ಸಮರ್ಥ. ಶಿವನ ಸಾಕ್ಷಾತ್ಕಾರ ಇನ್ನೊಂದು ರೂಪವೇ ಶ್ರೀ ಗುರು. ನಿಜವಾದ ಗುರುವಿನಿಂದ ಅರಿವು ಸಂಸ್ಕಾರ ಪಡೆದು ಜೀವನ ಸಾರ್ಥಕ ಪಡಿಸಿಕೊಳ್ಳಬೇಕೆಂದರು.

ಮುಖ್ಯ ಅತಿಥಿಗಳಾಗಿ ದೇವಸ್ಥಾನ ಸಮಿತಿ ಕಾರ್ಯದರ್ಶಿ ಕೊಂಡಜ್ಜಿ ಪಂಚಾಕ್ಷರಿ, ಕರಿಬಸಪ್ಪ ಕುಂಬಾರ, ಅಣ್ಣಪ್ಪ ಪ್ರಜಾರ, ಗಜಾಪುರ ವೀರಯ್ಯ, ಶಾಂತಕುಮಾರಿ ಇನ್ನೂ ಮೊದಲಾದ ಗಣ್ಯರು ಪಾಲ್ಗೊಂಡು, ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಪಡೆದರು.

ಉಪನ್ಯಾಸಕ ಕೆ.ಕೆ. ವಜ್ರೇಶ್ ಸ್ವಾಗತಿಸಿದರು. ಕುಮಾರಿ ಗೌರಿಶ್ರೀ ಮೂರ್ಕಲ್ ಹಾಗೂ ಕೊಂಡಜ್ಜಿ ಶಾಂಭವಿ ಭರತ ನಾಟ್ಯ ಅಭಿನಯಿಸಿದರು. ಕಾಂತರಾಜ ಮತ್ತು ವೀರೇಶ್ ಸಂಗೀತ ಸೇವೆ ಸಲ್ಲಿಸಿದರು. ರತ್ನ ಸಾಲಿಮಠ ಹಾಗೂ ಡಾ. ಎ.ಎಮ್. ರಾಜಶೇಖರ ನಿರೂಪಿಸಿದರು.

ಸುಲಫಲ್ ದೇವರ ಮಠದ ಲಿಂ. ಶ್ರೀಮತಿ ಶಾಂತಮ್ಮ ಮತ್ತು ಪಂಚಾಕ್ಷರಯ್ಯ ಸ್ಮರಣಾರ್ಥ ಅವರ ಮಕ್ಕಳು ದಾಸೋಹ ಸೇವೆ ಸಲ್ಲಿಸಿದರು.

# ಪ್ರವಾಸೋದ್ಯಮಕ್ಕೆ ಡಿಸಿ ಮಾಸ್ಟರ್ ಪ್ಲಾನ್

**(1ನೇ ಪುಟದಿಂದ)** ಪ್ರವಾಸೋದ್ಯಮಕ್ಕೆ ಹೆಚ್ಚು ಅವಕಾಶ ಇರುವ ಕರ್ನಾಟಕದಲ್ಲಿ 320 ಕಿ.ಮೀ ಕರಾವಳಿ ಇದೆ, ಇದರ ಸಮರ್ಪಕ ಬಳಕೆಯಾಗಿಲ್ಲ. ಸಿಆರ್‌ಝೆಡ್ ಕಾಯ್ದೆಯಿಂದ ಅಭಿವೃದ್ಧಿಗೆ ಕೆಲವು ತೊಡಕುಗಳು ಎದುರಾಗಿದ್ದು, ಇದರ ಪರಿಹಾರಕ್ಕೆ ಪ್ರಯತ್ನಿಸಬೇಕು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಜಿಲ್ಲಾಧಿಕಾರಿಗಳು ಪ್ರವಾಸಿ ತಾಣಗಳ ಅಭಿವೃದ್ಧಿ ಸಾಧ್ಯತೆಗಳನ್ನು ಗುರುತಿಸಿ, ಖಾಸಗಿ ಸಹಭಾಗಿತ್ವದಲ್ಲಿ ಮಾತ್ರವಲ್ಲದೆ ಸರ್ಕಾರದಿಂದಲೂ ಮುಂದುವರೆಯಬೇಕು. ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಎಲ್ಲಾ ಅಂಶಗಳನ್ನು ಸೇರಿಸಲಾಗುವುದು ಹಾಗೂ ಪೂರಕ ಅನುದಾನ ಒದಗಿಸಲಾಗುವುದು ಎಂದರು.

ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಗೆ ನೀಲ ನಕಾಶೆ ಸಿದ್ಧಪಡಿಸಬೇಕು, ಪ್ರವಾಸೋದ್ಯಮಕ್ಕೆ ಪೂರಕ ವಾತಾವರಣ ಸೃಷ್ಟಿಸಿದರೆ ಮಾತ್ರ ಬಂಡವಾಳ ಹೂಡಿಕೆದಾರರು ಮುಂದೆ ಬರುತ್ತಾರೆ. ಕೆಲವೇ ಪ್ರವಾಸೋದ್ಯಮ ತಾಣಗಳಿಗೆ ಪ್ರಾಮುಖ್ಯತೆ ದೊರೆಯುತ್ತಿದೆ, ರಾಜ್ಯದಲ್ಲಿ 25 ಸಾವಿರ ಸ್ಮಾರಕಗಳಿವೆ. ಇವುಗಳಲ್ಲಿ ಸುಮಾರು 23 ಸಾವಿರ ಸ್ಮಾರಕಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ ಸೌಲಭ್ಯ ಕಾಯ್ದೆ 2015ನ್ನು ಸಮರ್ಪಕ ಅನುಷ್ಠಾನಕ್ಕೆ ತಂದರೆ ಪ್ರವಾಸೋದ್ಯಮ ತಾಣಗಳ ಅಭಿವೃದ್ಧಿ ಸಾಧ್ಯವಿದೆ ಎಂದರು.

ಜಿಲ್ಲಾವಾರು ಪ್ರವಾಸೋದ್ಯಮ ತಾಣಗಳ ಸಮೀಕ್ಷೆ, ಸಂರಕ್ಷಣೆಗೆ ಮಾಸ್ಟರ್ ಪ್ಲಾನ್ ಸಿದ್ಧಪಡಿಸಬೇಕು. ಮೂರು ತಿಂಗಳಲ್ಲಿ ಕಾರ್ಯ ಪೂರ್ಣಗೊಳಿಸಬೇಕು. ಪ್ರವಾಸಿ ತಾಣಗಳನ್ನು ಹಂತಹಂತವಾಗಿ ಪುನರುಜ್ಜೀವನಗೊಳಿಸಲು ಕ್ರಮ ಕೈಗೊಳ್ಳಬೇಕು.

ಜಿಲ್ಲಾ ಪ್ರವಾಸೋದ್ಯಮ ಕುರಿತ ಪುಸ್ತಕಗಳ ಬಿಡುಗಡೆ, ಸ್ಮಾರಕ ದತ್ತಿ ಕಾರ್ಯಕ್ರಮಗಳ ಜಾರಿ, ಸ್ಮಾರಕಗಳ ದತ್ತು ಹಾಗೂ ಸಂರಕ್ಷಣೆ ಕಾರ್ಯ ಆಗಬೇಕು.

ಕರಾವಳಿ ಹಾಗೂ ಮಲೆನಾಡು ಪ್ರದೇಶಕ್ಕೆ ಪ್ರತ್ಯೇಕ ಯೋಜನೆ ರೂಪಿಸಬೇಕಿದೆ. ಇದರಿಂದ ತೆರಿಗೆ ಸಂಗ್ರಹ ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಸಾಧ್ಯ, ಕರಾವಳಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಮುಂಬೈ ಹಾಗೂ ಕೊಲ್ಲಿ ರಾಷ್ಟ್ರಗಳಿಗೆ ಉದ್ಯೋಗ ಅರಸಿ ಹೋಗುವ ಪರಿಸ್ಥಿತಿ ಬದಲಾಗಬೇಕಿದೆ ಎಂದರು.

ಸಚಿವ ಹೆಚ್.ಕೆ.ಪಾಟೀಲ್ ಮಾತನಾಡಿ, ರಾಜ್ಯದಲ್ಲಿನ 25 ಸಾವಿರ ಸ್ಮಾರಕಗಳ ಸಮೀಕ್ಷೆ, ಸಂರಕ್ಷಣೆ ಹಾಗೂ ಮಹತ್ವ ಅರಿತ ಗೈಡ್‌ಗಳ ನೇಮಕ, ಜಿಲ್ಲೆಗಳ ಉತ್ತಮ ಸಾಹಿತಿ, ಬರಹಗಾರರು, ಕಲಾವಿದರ ನೆರವು ಪಡೆದು 3 ತಿಂಗಳಲ್ಲಿ ಮಾಸ್ಟರ್ ಪ್ಲಾನ್ ಸಿದ್ಧಪಡಿಸಿ ಪ್ರವಾಸೋದ್ಯಮ ಸಮಿತಿ ಮುಂದೆ ಸಲ್ಲಿಸಿ, ಮಾಸ್ಟರ್ ಪ್ಲಾನ್‌ಗೆ ಹಣಕಾಸು ಒದಗಿಸಲಾಗುವುದು ಎಂದರು.

# ಜಿ.ಎಂ ಸಂಸ್ಥೆ ಹೆಮ್ಮರವಾಗಿ ಬೆಳೆದಿರುವುದು ಹೆಮ್ಮೆ



ದಾವಣಗೆರೆ, ಜು.9- ಗೌಡರ ಮಲ್ಲಿಕಾರ್ಜುನಪ್ಪ ಮತ್ತು ತುಮಕೂರಿನ ಮಾಜಿ ಲೋಕಸಭಾ ಸದಸ್ಯ ಜಿ.ಎಸ್ ಬಸವರಾಜು ಅವರ ಒಡನಾಟದಲ್ಲಿ ಜಿಎಂಐಟಿ ಕಾಲೇಜು ಸ್ಥಾಪನೆಯಾಯಿತು ಎಂದು ತುಮಕೂರು ನಗರದ ಶಾಸಕರಾದ ಜ್ಯೋತಿ ಗಣೇಶ್ ಹೇಳಿದರು.

ನಗರದ ಜಿ.ಎಂ ವಿಶ್ವವಿದ್ಯಾಲಯದ ಹಾಲಮ್ಮ ಸಭಾಂಗಣದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಲಿಂಗೈಕ್ಯ ಗೌಡರ ಮಲ್ಲಿಕಾರ್ಜುನಪ್ಪನವರ 95ನೇ ಜನ್ಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಲಿಂಗೈಕ್ಯರನ್ನು ಸ್ಮರಿಸಿ ಮಾತನಾಡಿದರು.

ಈ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವಲ್ಲಿ ಜಿಎಂ ಸಂಸ್ಥೆ ಹೆಮ್ಮರವಾಗಿ ಬೆಳೆದಿರುವುದು ನಮ್ಮೆಲ್ಲರಿಗೂ ಹೆಮ್ಮೆ ಎಂದು ತಿಳಿಸಿದರು.

ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಮಾತನಾಡಿ, ನಮ್ಮ ತಂದೆಯವರ ಆಸೆಯಂತೆ ಅವರು ಕಟ್ಟಿದ ಈ ಶಿಕ್ಷಣ ಸಂಸ್ಥೆ ಇಂದು ಸಾಕಷ್ಟು ಆಸರೆಯಾಗಿ ಶಿಕ್ಷಣ ನೀಡುತ್ತಾ ಮಧ್ಯ ಕರ್ನಾಟಕ ಭಾಗದ ಅತಿ ದೊಡ್ಡ ಸಂಸ್ಥೆಯಾಗಿ ಹೊರಹೊಮ್ಮಿದೆ ಎಂದು ಹೇಳಿದರು.

ಇದೇ ವೇಳೆ ಪಿ.ಎಚ್.ಡಿ ಪಡೆದ ಅಧ್ಯಾಪಕರುಗಳಿಗೆ ಸನ್ಮಾನಿಸಿದರು.

ನಿವೃತ್ತ ನ್ಯಾಯಮೂರ್ತಿ ಡಾ.ಜಸ್ಟಿಸ್ ಎಚ್. ಬಿ. ಪ್ರಭಾಕರ್, ಜಿ.ಎಂ ವಿವಿಯ ಕುಲಪತಿ ಡಾ.ಎಸ್.ಆರ್. ಶಂಖಪಾಲ್, ಕಾಲೇಜಿನ ಪ್ರಾಚಾರ್ಯ ಡಾ.ಎಂ.ಬಿ. ಸಂಜಯ್ ಪಾಂಡೆ, ಗಾಯತ್ರಿ ಸಿದ್ದೇಶ್ವರ, ಜಿ.ಎಂ. ವಿವಿಯ ಕುಲಾಧಿಪತಿ ಜಿ.ಎಂ ಲಿಂಗರಾಜು, ಆಡಳಿತಾಧಿಕಾರಿ ವೈ.ಯು. ಸುಭಾಷ್ ಚಂದ್ರ, ಆಡಳಿತ ಮಂಡಳಿ ಸದಸ್ಯ ಡಾ.ಕೆ. ದಿವ್ಯಾನಂದ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕಥುವಾ, ದೋಡಾದಲ್ಲಿ ಉಗ್ರರ ವಿರುದ್ಧ ಕಾರ್ಯಾಚರಣೆ

ಜಮ್ಮು, ಜು. 9 - ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿದೆ.

ಈ ನಡುವೆ ಕಥುವ ಜಿಲ್ಲೆಯಲ್ಲಿ ಉಗ್ರರ ವಿರುದ್ಧ ನಡೆಸಲಾಗುತ್ತಿರುವ ಕಾರ್ಯಾಚರಣೆ ಮತ್ತಷ್ಟು ವಿಸ್ತರಿಸಲಾಗಿದೆ. ಕಾರ್ಯಾಚರಣೆಗಾಗಿ ರಾಷ್ಟ್ರೀಯ ತನಿಖಾ ತಂಡ ಹಾಗೂ ವಿಶೇಷ ಪಡೆಗಳ ನೆರವು ಪಡೆಯಲಾಗುತ್ತಿದೆ. ಕಥುವಾದಲ್ಲಿ ಉಗ್ರರು ನಡೆಸಿದ ದಾಳಿಯಲ್ಲಿ ಐವರು ಸೈನಿಕರು ಹುತಾತ್ಮರಾಗಿದ್ದರು. ನಂತರ ಉಗ್ರರ ವಿರುದ್ಧ ಕಾರ್ಯಾಚರಣೆ ಆರಂಭಿಸಲಾಗಿತ್ತು.

ಕಥುವಾದ ಮಚೇಡಿ ಪ್ರಾಂತ್ಯದ ದುರ್ಗಮ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕಾರ್ಯಾಚರಣೆ ಉಸ್ತುವಾರಿಗಾಗಿ ಡಿ.ಜಿ.ಪಿ. ಆರ್.ಆರ್. ಸ್ವೇನ್ ಅವರನ್ನು ರವಾನಿಸಲಾಗಿದೆ.

ಉಧಾಂಪುರ ಹಾಗೂ ಕಥುವಾ ಜಿಲ್ಲೆಗಳ ವಿಶಾಲ ಪ್ರದೇಶದಲ್ಲಿ ಉಗ್ರರ ಶೋಧ ನಡೆಸಲಾಗುತ್ತಿದೆ. ಉಗ್ರರ ವಿರುದ್ಧ ಸರ್ಜಿಕಲ್ ಕಾರ್ಯಾಚರಣೆಗಾಗಿ ವಿಶೇಷ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಥುವಾದಲ್ಲಿ ಕಾರ್ಯಾಚರಣೆ ನಡೆಯುತ್ತಿರುವ ವೇಳೆಗೆ ದೋಡಾ ನಗರದದ 35 ಕಿ.ಮೀ. ದೂರದಲ್ಲಿರುವ ಘಡಿ ಭಗವ ಅರಣ್ಯದಲ್ಲಿ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿದೆ. ಈ ಪ್ರದೇಶದಲ್ಲಿ ಕನಿಷ್ಠ ಮೂವರು ವಿದೇಶಿ ಉಗ್ರರು ಇದ್ದಾರೆ ಎಂಬ ಗುಪ್ತಚರ ಮಾಹಿತಿ ನಂತರ ಕಾರ್ಯಾಚರಣೆ ನಡೆಸಲಾಗುತ್ತಿದೆ.

# ಶಾಲಾ ಕೊಠಡಿ ಧ್ವಂಸ : ದೂರು ದಾಖಲಿಸಲು ಶಾಸಕರ ಸೂಚನೆ

ಹರಿಹರ, ಜು. 9- ತಾಲ್ಲೂಕಿನ ಮಲೇಬೆನ್ನೂರಿನಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಿಸಲು ಶಾಲಾ ಕೊಠಡಿ ಧ್ವಂಸಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸುವಂತೆ ಬಿಇಓ ಹನುಮಂತಪ್ಪ ಅವರಿಗೆ ಶಾಸಕ ಬಿ.ಪಿ. ಹರೀಶ್ ಸೂಚನೆ ನೀಡಿದರು.

ನಗರದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಅಭಿವೃದ್ಧಿ ಕುರಿತು ಪರಿಶೀಲನೆ ನಡೆಸಿದರು

'ನನ್ನ ಗಮನಕ್ಕೆ ಬರದಂತೆ ಕಳೆದ 15 ದಿನಗಳ ಹಿಂದೆಯೇ ಶಾಲಾ ಕೊಠಡಿ ಧ್ವಂಸ ಕಾರ್ಯ ನಡೆದಿದೆ ಎಂದು ಬಿಇಓ ಹೇಳಿದಾಗ, ಕೊಠಡಿ ಧ್ವಂಸಗೊಳಿಸಿ ಇಷ್ಟು ದಿನ ಕಳೆದರೂ ದೂರು ದಾಖಲಿಸದೇ ಇರುವುದಕ್ಕೆ ಏನಿದೆ ಒಳ ಮರ್ಮ ? ಎಂದು ಶಾಸಕರು ಪ್ರಶ್ನಿಸಿದರು.

ತಕ್ಷಣವೇ ಈ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಆ ಶಾಲೆಯ ಮುಖ್ಯ ಶಿಕ್ಷಕರಿಂದ ಮಾಹಿತಿ ಪಡೆದು ದೂರು ದಾಖಲಿಸಿ ಎಂದು ಸೂಚಿಸಿದರು.



ನಗರದ ಶೇ.80ರಷ್ಟು ಬಡಾವಣೆಗಳು ನಿಯಮಾನುಸಾರ ಆಗದೇ ಇರುವುದರಿಂದ ಮನೆ ನಿರ್ಮಿಸುವುದಕ್ಕಾಗಿ ಲೈಸೆನ್ಸ್ ಪಡೆಯಲು ಇಲ್ಲಿನ ನಿವಾಸಿಗಳಿಗೆ ತೊಂದರೆ ಆಗುತ್ತಿದೆ. ಈ ಕುರಿತು ದೂಡಾದ ಸಭೆಯಲ್ಲಿ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು, ತಹಶೀಲ್ದಾರ್, ನಗರಸಭೆ, ತಾಪಂ ಇಓ, ಸರ್ವೆ ಇಲಾಖೆ ಹಾಗೂ ನಿವೃತ್ತ ಸರ್ವೆ ಅಧಿಕಾರಿಗಳನ್ನು ಕೆಲಸಕ್ಕೆ ನೇಮಿಸಿಕೊಂಡು ಸರ್ವೆ ಕಾರ್ಯ ಮುಗಿಸುವಂತೆ ತಿಳಿಸಿದರು.

ಡೆಂಗ್ಯೂ ಹಾವಳಿ ಹೆಚ್ಚಾಗಿದ್ದರಿಂದ ಸಾರ್ವಜನಿಕರ ಸುರಕ್ಷತೆಗಾಗಿ ಆರೋಗ್ಯ ಇಲಾಖೆ ಜಾಗೃತಿ ಕಾರ್ಯಕ್ರಮ ನಡೆಸಬೇಕು ಮತ್ತು ನಗರಸಭೆ ಅಧಿಕಾರಿಗಳು ಮತ್ತು ಪಿಡಿಓಗಳು ಸ್ವಚ್ಛತೆಗೆ ಹೆಚ್ಚು ಗಮನ ಕೊಡಬೇಕೆಂದು ಸೂಚನೆ ನೀಡಿದರು.

ತಾಲ್ಲೂಕಿನಲ್ಲಿ 5 ಡೆಂಘಿ ಹಾಗೂ 5 ಚಿಕುನ್ ಗುನ್ಯಾ ಪ್ರಕರಣಗಳು ದಾಖಲಾಗಿದ್ದು, ತಾಲ್ಲೂಕಿನ ಪ್ರತಿ ಗ್ರಾಮದಲ್ಲೂ ಲಾರ್ವಾ ಸರ್ವೆ ಮಾಡಲಾಗಿದೆ. ಯುವಕನೊಬ್ಬ ಡೆಂಗ್ಯೂ ಸೋಂಕಿಗೆ ಬಲಿಯಾದ ಮಾಹಿತಿ ನಮ್ಮ ಗಮನಕ್ಕೆ ಬಂದಿಲ್ಲ ಎಂದು ಆರೋಗ್ಯ ಇಲಾಖೆಯ ಅಧಿಕಾರಿ ಅಬ್ದುಲ್ ಖಾದರ್ ತಿಳಿಸಿದರು.

ತಾಲ್ಲೂಕಿನಲ್ಲಿ ಎಷ್ಟು ಕಾರ್ಮಿಕರ ಆರೋಗ್ಯ ತಪಾಸಣೆ ಮಾಡಲಾಗಿದೆ ಮತ್ತು ಎಷ್ಟು ಹಣ ಅವ್ಯವಹಾರ ನಡೆದಿದೆ ಎಂದು ಶಾಸಕರು ಪ್ರಶ್ನಿಸಿದಾಗ, ಕಟ್ಟಡ ಕಾರ್ಮಿಕರ ತಪಾಸಣೆ ರಾಜ್ಯಮಟ್ಟದಲ್ಲಿ ಟೆಂಡರ್ ಆಗಿರುತ್ತದೆ. ತಾಲ್ಲೂಕಿನಲ್ಲಿ 28,323 ಕಟ್ಟಡ ಕಾರ್ಮಿಕರ ನೋಂದಣಿ ಇದ್ದು, ಅದರಲ್ಲಿ 730 ಜನ ಮಾತ್ರ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಕಿಟ್ ಪಡೆದಿದ್ದಾರೆ ಎಂದು ಕಾರ್ಮಿಕ ಇಲಾಖೆಯ ಅಧಿಕಾರಿ ಕವಿತಾ ಹೇಳಿದರು.

ತಾ.ಪಂ. ಇಓ ರಾಮಕೃಷ್ಣಪ್ಪ, ತಾಲ್ಲೂಕಿನಲ್ಲಿ ಎಸ್ಸಿ ಹಾಸ್ಟೆಲ್ ಮತ್ತು ಇನ್ನೂ ಹೆಚ್ಚುವರಿ ಹಾಸ್ಟೆಲ್ ಅವಶ್ಯಕತೆ ಇರುವುದರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಈ ವೇಳೆ ತಹಶೀಲ್ದಾರ್ ಗುರುಬಸವ ರಾಜ್, ಕೃಷಿ ಇಲಾಖೆಯ ನಾರಾಯಣಗೌಡ, ಲೋಕೋಪಯೋಗಿ ಇಲಾಖೆ ಶಿವಮೂರ್ತಿ, ಬೆಸ್ಕಾಂ ಇಲಾಖೆಯ ರಮೇಶ್ ನಾಯಕ, ಬಿಸಿಎಂ ಇಲಾಖೆ ಆಸ್ಮಾ ಬಾನು, ತೋಟಗಾರಿಕೆ ಇಲಾಖೆ ಶಶಿಧರ್, ಪಶುಪಾಲನೆ ಇಲಾಖೆ ಸಿದ್ದೇಶ್, ಡಾ. ಹನುಮನಾಯ್ಕ್, ನಗರಸಭೆ ಎಇಇ ತಿಪ್ಪೇಸ್ವಾಮಿ, ಆಹಾರ ಇಲಾಖೆಯ ಪರಮೇಶ್ವರಪ್ಪ, ಅಬಕಾರಿ ಇಲಾಖೆಯ ಅಧಿಕಾರಿ ಶೀಲಾ, ಕಾರ್ಮಿಕ ಇಲಾಖೆಯ ಅಧಿಕಾರಿ ಕವಿತಾ, ಸಿಡಿಪಿಓ ಇಲಾಖೆಯ ಪೂರ್ಣಿಮಾ ,ಆರ್‌ಟಿಓ ಇಲಾಖೆ ಶಶಿಧರ್, ತಾಪಂ ಇಲಾಖೆಯ ಲೆಕ್ಕಾಧಿಕಾರಿ ಲಿಂಗರಾಜ್, ಆರ್.ಜಿ. ಪೂಜಾ, ಕಿರಣ್ ಮತ್ತು ಇತರರಿದ್ದರು.

> ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರವು ಅಭಿವೃದ್ಧಿ ಕಾರ್ಯಕ್ಕೆ ಹಣ ಬಿಡುಗಡೆ ಮಾಡದಿರುವುದಕ್ಕೆ ತಾಲ್ಲೂಕಿನಲ್ಲಿ ಹೇಳಿಕೊಳ್ಳುವಂತಹ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲು ಆಗುತ್ತಿಲ್ಲ. ಇದರಿಂದಾಗಿ ಎಲ್ಲಾ ಇಲಾಖೆಗಳಲ್ಲಿ ಅಭಿವೃದ್ಧಿ ಶೂನ್ಯ ಹಾದಿಯಲ್ಲಿದ್ದು, ಕೆಡಿಪಿ ಸಭೆ ನಡೆಸಲು ಬೇಸರವಾಗುತ್ತಿದೆ.
>
> -ಬಿ.ಪಿ. ಹರೀಶ್., ಶಾಸಕ

# ವಿಶ್ವಚೇತನ ಶಾಲೆಯಲ್ಲಿ ವಿದ್ಯಾರ್ಥಿ ಪರಿಷತ್ತಿನ ಪದಗ್ರಹಣ



ದಾವಣಗೆರೆ, ಜು. 9 - ನಗರದ ವಿಶ್ವಚೇತನ ವಿದ್ಯಾನಿಕೇತನ ವಸತಿ ವಸತಿಯುತ ಪ್ರೌಢ ಶಾಲೆಯಲ್ಲಿ ನೂತನವಾಗಿ ನಡೆಸಲಾದ ವಿದ್ಯಾರ್ಥಿ ಪರಿಷತ್ ಚುನಾವಣೆಯಲ್ಲಿ ಆಯ್ಕೆಯಾದ ಪ್ರತಿನಿಧಿಗಳಿಗೆ ವಿದ್ಯಾರ್ಥಿ ಪರಿಷತ್ತಿನ ಪದಗ್ರಹಣ ಸಮಾರಂಭವನ್ನು ಆಯೋಜಿಸಲಾಗಿತ್ತು. ಚೇತನ ಸಮೂಹ ಶಾಲೆಗಳ ಅಕಾಡೆಮಿಕ್ ಡೀನ್ ಸುಬ್ಬರಾವ್ ಶಾಲಾ ಧ್ವಜಾರೋಹಣ ನೆರವೇರಿಸಿ ಗೌರವ ವಂದನೆ ಸ್ವೀಕರಿಸಿದರು.

ಶಾಲೆಯ ಆಡಳಿತಾಧಿಕಾರಿ ಶ್ರೀಮತಿ ಪ್ರೀತಿ, ಚೇತನಾ ವಸತಿ ಪಿಯು ಕಾಲೇಜು ಪ್ರಾಂಶುಪಾಲ ಜಿ. ವಿನೋದ್, ಚೇತನ ಸಿಬಿಎಸ್‌ಇ ಪ್ರಾಂಶುಪಾಲ ಪ್ರಕಾಶ್ ಜೋಗಿ, ರಾಜ್ಯ ಪಠ್ಯಕ್ರಮದ ಮುಖ್ಯೋಪಾಧ್ಯಾಯ ಬಿ.ಎಂ. ಬಸವರಾಜಯ್ಯ, ಉಪ ಪ್ರಾಂಶುಪಾಲ ಯುವರಾಜ್ ಕಾಂಬ್ಳೆ ಅವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಶಾಲಾ ಪರಿಷತ್ ಸಮಿತಿಯ ನಾಯಕನಾಗಿ ಎನ್. ವಿಜಯ್ ನಾಯಕಿಯಾಗಿ ಪಿ. ಶ್ರೇಯಾ, ಆರೋಗ್ಯ ಮತ್ತು ನೈರ್ಮಲ್ಯ ಸಚಿವನಾಗಿ ಕು. ಜಿ.ಕೆ. ವಿಶ್ವನಾಥ್, ಸಹ ಸಚಿವೆಯಾಗಿ ಕು. ಪೂರ್ವಿಕ, ಶಿಸ್ತು ಸಮಿತಿಯ ಸಚಿವನಾಗಿ ಕು. ವಿ. ಯುವರಾಜ್ ನಾಯ್ಡು, ಉಪ ಸಚಿವನಾಗಿ ಮಾನಸ್ ಮಲ್ಲಿಕ್, ಉಪ ಸಚಿವೆಯಾಗಿ ಕು. ಪ್ರೇರಣಾ. ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷನಾಗಿ ಕು. ಭಾರ್ಗವ್, ಉಪಾಧ್ಯಕ್ಷ ಹಾಗೂ ಸಾಂಸ್ಕೃತಿಕ ಸಚಿವರಾಗಿ ಕು. ಎನ್.ಟಿ. ಭರತ್, ಎನ್. ಹರ್ಷ, ಶಿಸ್ತು ಸಮಿತಿಯ ಸಚಿವರಾಗಿ ಕು. ಪವನ್ ಗೌಡ, ಕು. ಸಿದ್ದಾರ್ಥ್, ಕು. ಪ್ರೀತಮ್, ಕು. ಪ್ರಜ್ವಲ್, ಕು. ಮಿಥುನ್ ಹಾಗೂ ಐಶ್ವರ್ಯ ಅವರು ಆಯ್ಕೆಯಾಗಿದ್ದಾರೆ. ಶಾಲಾ ಪ್ರಾಂಶುಪಾಲ ಪ್ರಕಾಶ್ ಜೋಗಿ ಅವರು ಎಲ್ಲಾ ಪ್ರತಿನಿಧಿಗಳಿಗೆ ಪ್ರಮಾಣ ವಚನ ಬೋಧಿಸಿದರು.

# ವಾಲ್ಮೀಕಿ ನಿಗಮ : ಎಸ್.ಐ.ಟಿ.ಯಿಂದ ಮಾಜಿ ಸಚಿವ ನಾಗೇಂದ್ರ ವಿಚಾರಣೆ

ಬೆಂಗಳೂರು, ಜು. 9 - ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಅಕ್ರಮವಾಗಿ ಹಣ ವರ್ಗಾವಣೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರರನ್ನು ವಿಶೇಷ ತನಿಖಾ ತಂಡ ಮಂಗಳವಾರ ವಿಚಾರಣೆಗೆ ಒಳಪಡಿಸಿದೆ.

ವಾಲ್ಮೀಕಿ ನಿಗಮದ ಅಧಿಕಾರಿ ಚಂದ್ರಶೇಖರನ್ ಅವರು ಮೇ 26ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಪ್ರಕರಣದಲ್ಲಿ ನಾಗೇಂದ್ರ ಹೆಸರು ಕೇಳಿಬಂದಿದ್ದರಿಂದ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಇದೇ ವೇಳೆ ನಿಗಮದ ಅಧ್ಯಕ್ಷರೂ ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಸಹ ವಿಚಾರಣೆಗೆ ಹಾಜರಾಗಿದ್ದಾರೆ.

# ಖಾಸಗಿ ಶಾಲಾ-ಕಾಲೇಜುಗಳಲ್ಲಿ ಅನುಭವಿಲ್ಲದ ಶಿಕ್ಷಕರು: ಕ್ರಮಕ್ಕೆ ಆಗ್ರಹ

ದಾವಣಗೆರೆ, ಜು.9- ಖಾಸಗಿ ಶಾಲಾ-ಕಾಲೇಜುಗಳಲ್ಲಿ ಶಿಕ್ಷಕರು, ಉಪನ್ಯಾಸಕರು ಮತ್ತು ಪ್ರಾಂಶುಪಾಲರನ್ನು ನೇಮಕಾತಿ ಮಾಡುವ ಸಮಯದಲ್ಲಿ ಸಮಗ್ರ ದಾಖಲಾತಿ ಪರಿಶೀಲಿಸುವಂತೆ ಭಾರತ ಹಿಂದೂ ಮಹಾಸಭಾ ಜಿಲ್ಲಾಧ್ಯಕ್ಷ ಜೆ. ಅರುಣ್ ಕುಮಾರ್ ಆಗ್ರಹಿಸಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಖಾಸಗಿ ಶಾಲಾ-ಕಾಲೇಜುಗಳಲ್ಲಿ ನೇಮಕಾತಿ ಸಮಯದಲ್ಲಿ ವಿದ್ಯಾರ್ಹತೆ ಹಾಗೂ ಅನುಭವ ಇಲ್ಲದವರನ್ನು ಆಡಳಿತ ಮಂಡಳಿಗಳು ನೇಮಿಸಿಕೊಳ್ಳುತ್ತಿವೆ ಎಂದು ಆರೋಪಿಸಿದರು. ಸಂಬಂಧಪಟ್ಟ ಅಧಿಕಾರಿಗಳು ಅವರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಖಾಸಗಿ ಶಾಲಾ-ಕಾಲೇಜುಗಳಿಗೆ ವಿಚಾರಣೆಯ ಭೇಟಿ ನೀಡಬೇಕು. ಜೊತೆಗೆ ದಾಖಲೆ, ಹಾಜರಿ ಪುಸ್ತಕ, ವಿದ್ಯಾರ್ಹತೆಗಳನ್ನು ಪರಿಶೀಲಿಸಿ, ಸರಿಯಾಗಿ ನಿರ್ವಹಣೆ ಮಾಡದಿರುವ ಸಂಸ್ಥೆಗಳ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ನಗರದಲ್ಲಿ ಎಜುಕೇಷನ್ ಮಾಫಿಯಾ ಹೆಚ್ಚಾಗಿದೆ. ಲಕ್ಷಗಟ್ಟಲೆ ಡೊನೇಷನ್ ಪಡೆಯಲಾಗುತ್ತಿದೆ. ಆದರೆ ತರಬೇತಿ ಪಡೆಯದೇ ಇರುವ ಶಿಕ್ಷಕರು, ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಈ ಬಗ್ಗೆ ಕ್ರಮಕ್ಕೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಸ್.ಅರುಣ್ ಕುಮಾರ್, ವಕ್ತಾರ ಕೆ.ಜಿ. ಚಂದ್ರು, ಉಪಾಧ್ಯಕ್ಷ ಪ್ರಕಾಶ್ ಎಸ್. ಅರವಿಂದಾಕ್ಷ ಉಪಸ್ಥಿತರಿದ್ದರು.

# ಮಲೇಬೆನ್ನೂರಿನಲ್ಲಿ ಇಂದು ಆಂಗ್ಲ ಭಾಷಾ ಶಿಕ್ಷಕರ ಕಾರ್ಯಾಗಾರ

ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಹರಿಹರ ತಾಲ್ಲೂಕು ಆಂಗ್ಲ ಭಾಷಾ ಬೋಧಕರ ವೇದಿಕೆ ವತಿಯಿಂದ ತರಬೇತಿ ಕಾರ್ಯಾಗಾರವನ್ನು ಇಂದು ಬೆಳಗ್ಗೆ 10-30ಕ್ಕೆ ಶಾಲೆಯ ಉಪ ಪ್ರಾಚಾರ್ಯ ಜಗದೀಶ್ ಉಜ್ಜಮ್ಮನವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಹನುಮಂತಪ್ಪ ಮತ್ತು ದಾವಣಗೆರೆಯ ಡಯಟ್ ಅಧಿಕಾರಿಗಳು ಆಗಮಿಸಲಿದ್ದು, ಆಂಗ್ಲ ಭಾಷೆ ವೇದಿಕೆ ಅಧ್ಯಕ್ಷ ಸುರೇಶ್ ಎಸ್. ಮೂಲಿಮನಿ ಮತ್ತು ಕ್ಲಬ್‌ನ ಪದಾಧಿಕಾರಿಗಳು ಈ ಕಾರ್ಯಕ್ರಮವನ್ನು ಆಯೋಜಿಸಿರುತ್ತಾರೆ.

# ಕೆರೆಬಿಳಚಿ ಮೊರಾರ್ಜಿ ಶಾಲೆಗೆ ಶಾಸಕ ಶಿವಗಂಗಾ ದಿಢೀರ್ ಭೇಟಿ

ಚನ್ನಗಿರಿ, ಜು.9- ತಾಲ್ಲೂಕಿನ ಕೆರೆಬಿಳಚಿ ಅಲ್ಪ ಸಂಖ್ಯಾತರ ಮೊರಾರ್ಜಿ ವಸತಿಯುತ ಶಾಲೆಗೆ ಶಾಸಕ ಬಸವರಾಜು ವಿ. ಶಿವಗಂಗಾ ಇಂದು ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಸರ್ಕಾರ ಬಡ ಮಕ್ಕಳಿಗಾಗಿ ವಸತಿ ಶಾಲೆಗಳನ್ನು ತೆರೆದಿದ್ದು, ಯಾವುದೇ ಲೋಪವಾಗದಂತೆ ನೋಡಿ ಕೊಳ್ಳಬೇಕು ಎಂದು ತಾಕೀತು ಮಾಡಿದ ಶಾಸಕರು, ಇತ್ತೀಚೆಗೆ ಡೆಂಗ್ಯೂ ಪ್ರಕರಣ ಉಲ್ಬಣಗೊಳ್ಳುತ್ತಿದ್ದು, ಮಕ್ಕಳಿಗೆ ಆರೋಗ್ಯದಲ್ಲಿ ತೊಂದರೆಯಾಗದಂತೆ ಮುಂಜಾಗ್ರತೆ ಕ್ರಮ ವಹಿಸಬೇಕು.

ವಸತಿ ಶಾಲೆಯ ಎಲ್ಲಾ ಸಿಬ್ಬಂದಿಗಳು ಸರಿಯಾಗಿ ಕೆಲಸ ಮಾಡಬೇಕು, ಸಮಯಕ್ಕೆ ಸರಿಯಾಗಿ ತರಗತಿಗಳು ನಡೆಯಬೇಕೆಂದು ಸೂಚಿಸಿದರು.

ಇನ್ನೂ ಅಡುಗೆ ವಿಚಾರದಲ್ಲಿ ಯಾವುದೇ ರಾಜೀ ಆಗುವುದಿಲ್ಲ, ಗುಣಮಟ್ಟದ ಆಹಾರ ನೀಡಬೇಕು, ಪ್ರತಿನಿತ್ಯ ತರಕಾರಿ ಖರೀದಿ ಮಾಡಬೇಕು, ಶೇಖರಣೆ ಮಾಡಿದ ಆಹಾರ ಪದಾರ್ಥಗಳನ್ನು ಸಮಯ ಮುಗಿದ ಮೇಲೆ ಬಳಸಬಾರದು ಎಂದು ತಿಳಿಸಿದರು.

ಆಹಾರ ಸಾಮಗ್ರಿ ಸರಬರಾಜು ಮಾಡಲು ಟೆಂಡರ್ ನೀಡಿದ್ದರೆ ಅಂತವರ ಮೇಲೆ ನಿಗಾ ಇಡಲಾಗುತ್ತದೆ, ಯಾವುದೇ ಮೋಸ, ಅನ್ಯಾಯ ಕಂಡು ಬಂದರೂ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ವಸತಿ ನಿಲಯದ ಸಿಬ್ಬಂದಿಗಳಿಗೆ ಎಚ್ಚರಿಕೆ ನೀಡಿದರು.

ಕಳೆದ ವರ್ಷ ಇದೇ ಶಾಲೆಗೆ ಶಾಸಕರು ಭೇಟಿ ನೀಡಿ, ಅಲ್ಲಿನ ಅವ್ಯವಸ್ಥೆ ಕಂಡು ಆಕ್ರೋಶ ವ್ಯಕ್ತಪಡಿಸಿದ್ದರು. ಇದೀಗ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸುವ ಮೂಲಕ ವಸತಿ ಶಾಲೆ ಸಿಬ್ಬಂದಿಗೆ ಶಾಕ್ ನೀಡಿದ್ದಾರೆ. ಶಾಲೆಗೆ ಮಕ್ಕಳ ಪ್ರವೇಶದಲ್ಲಿ ಹೆಚ್ಚಳವಾಗಿದ್ದು, ಅಡುಗೆ ಮನೆ, ಶೌಚಾಲಯ, ಸ್ವಚ್ಛತೆಯನ್ನು ಕಾಪಾಡಿಕೊಂಡು ಹೋಗುವಂತೆ ಪ್ರಾಂಶುಪಾಲ ಎಸ್. ವೀರೇಶ್ ಅವರಿಗೆ ತಿಳಿಸಿದರು.

# ನಗರದ ಸ.ಪ್ರ.ದರ್ಜೆ ಕಾಲೇಜಿನಲ್ಲಿ ಇಂದು

ಸರ್ಕಾರಿ ಪದವಿ ಕಾಲೇಜಿನಲ್ಲಿ ಇಂದು ಕಾಲೇಜಿನ ವಿವಿಧ ಚಟುವಟಿಕೆಗಳ ಸಮಾರೋಪ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಉದ್ಘಾಟಕರಾಗಿ ಸಚಿವ ಎಸ್. ಎಸ್ ಮಲ್ಲಿಕಾರ್ಜುನ್ ಆಗಮಿಸುವರು.

ಮುಖ್ಯ ಅತಿಥಿಗಳಾಗಿ ಲೋಕ ಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ದಾವಿವಿಯ ಗಣಿತಶಾಸ್ತ್ರ ಪ್ರಾಧ್ಯಾಪಕ ಪ್ರೊ. ಪ್ರಸನ್ನ ಕುಮಾರ್, ದೂಡಾ ಆಯುಕ್ತ ಹುಲ್ಲುಮನಿ ತಿಮ್ಮಣ್ಣ, ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಪ್ರಾಂಶುಪಾಲ ಪ್ರೊ.ಸಿ.ಕೆ ಕೊಟ್ರಪ್ಪ ಭಾಗವಹಿಸುವರು. ಪ್ರಾಂಶುಪಾಲ ಪ್ರೊ. ಬಿ. ಸಿ. ದಾದಾಪೀರ್ ಅಧ್ಯಕ್ಷತೆ ವಹಿಸಲಿದ್ದಾರೆ.

# ರೊಹಿಂಗ್ಯ ವಿರುದ್ಧ ಮಾತನಾಡುವುದು ಭಾರತೀಯರ ವಿರುದ್ಧದ ಹೇಳಿಕೆಯಲ್ಲ : ಪೊಲೀಸ್

ಮುಂಬೈ, ಜು. 9 - ಮುಂಬೈ ಬಿಜೆಪಿ ನಾಯಕರು ತಮ್ಮ ಭಾಷಣಗಳಲ್ಲಿ 'ರೊಹಿಂಗ್ಯ ಹಾಗೂ ಬಾಂಗ್ಲಾದೇಶಿಯರು' ಎಂಬ ಪದಗಳನ್ನು ಬಳಸಿರುವುದು ಭಾರತೀಯರು ಹಾಗೂ ಯಾವುದೇ ಸಮುದಾಯದ ವಿರುದ್ಧ ಎಂದು ಪರಿಗಣಿಸುವುದಿಲ್ಲ ಎಂದು ಮಹಾರಾಷ್ಟ್ರ ಪೊಲೀಸರು ಮುಂಬೈ ಹೈಕೋರ್ಟ್‌ನಲ್ಲಿ ತಿಳಿಸಿದ್ದಾರೆ.

ನಿತೇಶ್ ರಾಣೆ ಸೇರಿದಂತೆ ಬಿಜೆಪಿ ಮುಖಂಡರು ರೊಹಿಂಗ್ಯ ಹಾಗೂ ಬಾಂಗ್ಲಾದೇಶಿಯರು ಎಂಬ ಪದ ಬಳಸಿರುವುದನ್ನು ಪ್ರಶ್ನಿಸಿ ನಾಲ್ಕು ಪ್ರಕರಣಗಳನ್ನು ದಾಖಲಿಸಲಾಗಿತ್ತು. ಇವರು ಸಾರ್ವಜನಿಕ ಸಮಾವೇಶಗಳಲ್ಲಿ ಧಾರ್ಮಿಕ ಗುಂಪುಗಳ ನಡುವೆ ವೈಷಮ್ಯ ತರಲು ಪ್ರಯತ್ನ ನಡೆಸಿದ್ದಾರೆ ಎಂದು ಆರೋಪಿಸಲಾಗಿತ್ತು.

ಬಿಜೆಪಿ ಮುಖಂಡರ ವಿರುದ್ಧ 295 ಎ ಸೆಕ್ಷನ್ ಅನ್ವಯ ಪ್ರಕರಣ ದಾಖಲಿಸಲಾಗಿತ್ತು. ಈ ಬಗ್ಗೆ ನ್ಯಾಯಾಲಯದ ಎದುರು ಹಾಜರಾದ ಪಬ್ಲಿಕ್ ಪ್ರಾಸಿಕ್ಯೂಟರ್ ಹಿತೇನ್ ವೆಣೆಗಾಂವ್‌ಕರ್, ಒಂದು ಪ್ರಕರಣದಲ್ಲಿ ಮಾತ್ರ ನಿತೀಶ್ ರಾಣೆ ವಿರುದ್ಧ 275 ಎ ಸೆಕ್ಷನ್ ಅನ್ವಯ ಪ್ರಕರಣ ಸಾಧ್ಯ ಎಂದು ಹೇಳಿದರು.

ರೋಹಿಂಗ್ಯ ಹಾಗೂ ಬಾಂಗ್ಲಾದೇಶಿಯರು ಭಾರತದವರಲ್ಲ. ಅವರು ಅಕ್ರಮವಾಗಿ ಭಾರತವನ್ನು ಪ್ರವೇಶಿಸಿದ್ದಾರೆ. ಇದು ಅಂಗೀಕೃತವಾದ ನಿಲುವಾಗಿದೆ. ಇದನ್ನು ಹೇಳುವುದರಿಂದ ಯಾವುದೇ ಭಾರತೀಯ ಇಲ್ಲವೇ ಸಮುದಾಯದ ಭಾವನೆಗಳಿಗೆ ಧಕ್ಕೆ ಆಗುವುದಿಲ್ಲ ಎಂದು ವೆಣೆಗಾಂವ್‌ಕರ್ ವಾದಿಸಿದ್ದಾರೆ.

ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ಹಾಗೂ ಶಾಮ್ ಚಂದ್ರ ಅವರನ್ನು ಒಳಗೊಂಡ ಪೀಠದ ಎದುರು ಈ ವಾದ ಮಂಡಿಸಲಾಗಿದೆ. ಪೀಠ ಈ ವಾದವನ್ನು ಒಪ್ಪಿಕೊಂಡಿದೆ.

# ಸಾಕುಪ್ರಾಣಿಗಳಿಗೆ ತಪ್ಪದೇ ಲಸಿಕೆ ಹಾಕಿಸಿ



ಮಲೇಬೆನ್ನೂರು

ಮಲೇಬೆನ್ನೂರು, ಜು.9- ರೇಬಿಸ್ ಚುಚ್ಚುಮದ್ದು ಕಂಡು ಹಿಡಿದ ಲೂಯಿಸ್ ಪಾಶ್ಚರ್ ಅವರ ಕೊಡುಗೆ ಸ್ಮರಣೀಯವಾಗಿದ್ದು, ರೇಬಿಸ್ ಚುಚ್ಚುಮದ್ದು ಇಲ್ಲವಾಗಿದ್ದರೆ, ಪ್ರಾಣಿಗಳಿಂದ ದಾಳಿಗೊಳಗಾದ ಸಂದರ್ಭದಲ್ಲಿ ಚಿಕಿತ್ಸೆ ನೀಡಲು ಬಹಳ ತೊಂದರೆ ಆಗುತ್ತಿತ್ತು ಎಂದು ಟಿಹೆಚ್‌ಓ ಡಾ. ಅಬ್ದುಲ್ ಖಾದರ್ ತಿಳಿಸಿದರು.

ಅವರು ಮಂಗಳವಾರ ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ಬೀರಲಿಂಗೇಶ್ವರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆರೋಗ್ಯ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವ ಪ್ರಾಣಿ ಜನ್ಯರೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶ್ರೇಷ್ಠ ವಿಜ್ಞಾನಿ ಲೂಯಿಸ್ ಪಾಶ್ಚರ್ ಅವರ ಗೌರವಾರ್ಥ ಪ್ರತಿ ವರ್ಗ ಜುಲೈ 6 ರಂದು ವಿಶ್ವ ಪ್ರಾಣಿ ಜನ್ಯ ರೋಗ ದಿನವನ್ನು ಆಚರಿಸುತ್ತೇವೆ. 1885ರಲ್ಲಿ ಮೊಟ್ಟ ಮೊದಲ ಬಾರಿಗೆ ರೇಬಿಸ್ ಲಸಿಕೆಯನ್ನು ಲೂಯಿಸ್ ಪಾಶ್ಚರ್ ಕಂಡು ಹಿಡಿದರು ಎಂದು ಡಾ. ಖಾದರ್ ಹೇಳಿದರು.

ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ಮಾತನಾಡಿ, ಮನೆಯಲ್ಲಿ ಸಾಕುವ ಎಲ್ಲಾ ಪ್ರಾಣಿಗಳಿಗೆ ಲಸಿಕೆಗಳನ್ನು ಹಾಕಿಸಬೇಕೆಂದರು.

ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಮಾತನಾಡಿ, ಯಾವುದೇ ಪ್ರಾಣಿ ಕಚ್ಚಿದ ತಕ್ಷಣ ಸುಣ್ಣ ಹಚ್ಚುವ ಬದಲು, ರಭಸವಾದ ನೀರಿನಿಂದ ಗಾಯವನ್ನು ತೊಳೆಯಬೇಕು. ನಂತರ ಸಮೀಪದ ಸರ್ಕಾರಿ ಆಸ್ಪತ್ರೆಗೆ ತೆರಳಿ ರೇಬಿಸ್ ಲಸಿಕೆ ಹಾಕಿಸಿಕೊಳ್ಳಬೇಕೆಂದರು.

ಸಾಕು ಪ್ರಾಣಿಗಳಿಂದ ಹರಡುವ ಮಾರಣಾಂತಿಕ ಕಾಯಿಲೆಗಳಿಂದ ರಕ್ಷಿಸಿಕೊಳ್ಳಲು ಕಾಲ ಕಾಲಕ್ಕೆ ಸರಿಯಾಗಿ ಅವುಗಳಿಗೆ ಲಸಿಕೆ ಹಾಕಿಸಬೇಕೆಂದು ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಡಾಟಾ ವ್ಯವಸ್ಥಾಪಕ ಮಿಲನ್ ಹೇಳಿದರು.

ಕಾಲೇಜಿನ ಪ್ರಾಚಾರ್ಯ ರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್, ಪುರಸಭೆ ಆರೋಗ್ಯ ನಿರೀಕ್ಷಣಾಧಿಕಾರಿ ಶಿವರಾಜ್, ಸಮುದಾಯ ಆರೋಗ್ಯ ಕೇಂದ್ರದ ಕಿರಣ್, ಅರಣ್ಯ ಇಲಾಖೆಯ ಸದನ್ ಮತ್ತಿತರರು ಭಾಗವಹಿಸಿದ್ದರು.

# ದೇವಾಂಗ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಜು. 9 - ದಾವಣಗೆರೆ ನಗರ ದೇವಾಂಗ ಸಂಘದಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ.85% ರಷ್ಟು ಸಿಬಿಎಸ್‌ಸಿ ಶೇ.75% ಅಂಕ ಪಡೆದ ದೇವಾಂಗ ಸಮಾಜದ ವಿದ್ಯಾರ್ಥಿಗಳಿಗೆ ಇದೇ ದಿನಾಂಕ 14 ರಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಮಾಜದ ಅರ್ಹ ವಿದ್ಯಾರ್ಥಿಗಳು ನಗರದ ಶ್ರೀ ದೇವಾಂಗ ವಿದ್ಯಾರ್ಥಿ ನಿಲಯ, ಡಾ. ಪುರಂತರ ಆಸ್ಪತ್ರೆ ಹತ್ತಿರ, ಎಂಸಿಸಿ ಎ ಬ್ಲಾಕ್, ದಾವಣಗೆರೆ ಇಲ್ಲಿಗೆ ಅರ್ಜಿ ಸಲ್ಲಿಸಬೇಕಿದೆ.

ಹೆಚ್ಚಿನ ಮಾಹಿತಿಗೆ 9449422359, 9880662036 ಗೆ ಸಂಪರ್ಕಿಸಬಹುದಾಗಿದೆ.

# ಸಾಲದ ಆಪ್ ಹಗರಣ : ಚೀನಾದ ಆರೋಪಿ ದೇಶ ಬಿಟ್ಟು ತೆರಳಲು ಅನುಮತಿ ನಕಾರ

ಬೆಂಗಳೂರು, ಜು. 9 - ಸಾಲದ ಆಪ್ ಹಗರಣಗಳಲ್ಲಿ ಸಿಲುಕಿರುವ ಚೀನಾದ ನಾಗರಿಕಳೊಬ್ಬಳು ತನ್ನ ದೇಶಕ್ಕೆ ಮರಳಲು ಅನುಮತಿ ಕೋರಿ ದಾಖಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ತಳ್ಳಿ ಹಾಕಿದೆ.

42 ವರ್ಷದ ಹು ಶಿಯೋಲಿನ್ ಅವರು ಸಾಲದ ಆಪ್ ಹಗರಣದಲ್ಲಿ ಸಿಲುಕಿ ಬಂಧನಕ್ಕೆ ಒಳಗಾಗಿದ್ದಾರೆ. ಪವರ್ ಬ್ಯಾಂಕ್ ಆ್ಯಪ್ ಹಗರಣದಲ್ಲಿ ಕರ್ನಾಟಕ ಹಾಗೂ ಕೇರಳದ ಹಲವರು ಕೋಟ್ಯಂತರ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ.

ಚೀನಾದಲ್ಲಿರುವ ಅನಾರೋಗ್ಯ ಪೀಡಿತ ತಮ್ಮ ತಂದೆ ಭೇಟಿ ಮಾಡಲು ಜಾಮೀನು ನೀಡಬೇಕೆಂದು ಶಿಯೋಲಿನ್ ಮನವಿ ಸಲ್ಲಿಸಿದರು.

ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ, ಚೀನಾದ ದಂಡ ಸಂಹಿತೆ ಪ್ರಕಾರ ವ್ಯಕ್ತಿಯೊಬ್ಬರು ಆರೋಪಿಯಾದಾಗ ವಿಚಾರಣೆ ಪೂರ್ಣಗೊಳ್ಳುವವರೆಗೂ ಅವರು ದೇಶ ಬಿಟ್ಟು ಹೋಗಲು ಅವಕಾಶ ನೀಡುವುದಿಲ್ಲ ಎಂದರು.

ಅರ್ಜಿದಾರರು ಚೀನಾದ ನಾಗರಿಕರಾಗಿದ್ದಾರೆ. ಚೀನಾದಲ್ಲಿ ಜಾರಿಯಲ್ಲಿರುವ ಕಾಯ್ದೆಗಳ ಬಗ್ಗೆ ಅವರಿಗೆ ತಿಳಿದಿದೆ. ಈ ರೀತಿಯ ಪರಿಸ್ಥಿತಿಗಳಲ್ಲಿ ಚೀನಾ ಕಾಯ್ದೆಯಲ್ಲಿ ದೇಶ ಬಿಟ್ಟು ಹೋಗಲು ಅವಕಾಶ ಇಲ್ಲ ಎನ್ನುವುದಾದರೆ, ಭಾರತದ ಕಾಯ್ದೆಗಳಲ್ಲಿ ಅಂಥದಕ್ಕೆ ಅವಕಾಶ ನೀಡಲಾಗದು. ಅದರಲ್ಲೂ ಚೀನಾದ ನಾಗರಿಕ ಹಲವು ಅಪರಾಧಗಳಲ್ಲಿ ಸಿಲುಕಿರುವಾಗ ಜಾಮೀನು ನೀಡಲು ಸಾಧ್ಯವಾಗದು ಎಂದು ಹೈಕೋರ್ಟ್ ತಿಳಿಸಿದೆ.

ಹಲವಾರು ಅಪರಾಧಿಕ ಪ್ರಕರಣಗಳಲ್ಲಿ ಸಿಲುಕಿರುವ ಶಿಯೋಲಿನ್ ದೇಶ ಬಿಟ್ಟು ಹೋಗಲು ಅವಕಾಶ ನೀಡಿದರೆ ಪ್ರಕರಣದ ವಿಚಾರಣೆ ಪೂರ್ಣಗೊಳಿಸಲು ಸಾಧ್ಯವಾಗದೇ ಇರಬಹುದು. ಇದರಿಂದ ನ್ಯಾಯದಿಂದ ನುಣುಚಿಕೊಳ್ಳಲು ಅನುಮತಿ ನೀಡಿದಂತಾಗುತ್ತದೆ ಎಂದು ಹೈಕೋರ್ಟ್ ಹೇಳಿದೆ. 2017ರಲ್ಲಿ ಶಿಯೋಲಿನ್ ಅವರು ಬೆಂಗಳೂರಿನಲ್ಲಿರುವ ಅನಸ್ ಅಹಮದ್ ಎಂಬುವರನ್ನು ಮದುವೆಯಾಗಿದ್ದರು. ಉಭಯರು ವಂಚನೆ ಮಾಡಿರುವ ಬಗ್ಗೆ ರೇಸರ್‌ಪೇ ಕಂಪನಿಯು ದೂರು ದಾಖಲಿಸಿತ್ತು. ನಂತರ ಆರೋಪಿಯನ್ನು ಬಂಧಿಸಲಾಗಿತ್ತು. ಆನಂತರ ದೇಶ ಬಿಟ್ಟು ಹೋಗಬಾರದು ಎಂಬ ಷರತ್ತಿನೊಂದಿಗೆ ಜಾಮೀನು ನೀಡಲಾಗಿತ್ತು.

**ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಹಾಗೂ ಸಿಜೆಎಂ ನ್ಯಾಯಾಲಯ, ದಾವಣಗೆರೆ.**

**ಅಸಲು ದಾವೆ ಸಂಖ್ಯೆ : 182/2021**

ವಾದಿ : ರವೀಂದ್ರನಾಥ ಮತ್ತು ಇತರರು, ವಿರುದ್ಧ
ಪ್ರತಿವಾದಿ : ಕೆ. ಬಸವರಾಜ್ ಮತ್ತು ಇತರರು
ಪ್ರತಿವಾದಿ ಸಂಖ್ಯೆ 4 : ಡಾ. ಕೆ. ಚನ್ನಬಸವ ಪಾಟೀಲ್ ತಂದೆ ಕೆ. ಶೇಖರಗೌಡ, ವಯಸ್ಸು 42 ವರ್ಷ, ವಾಸ : ಹುಚ್ಚಂಗಿದುರ್ಗ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.
ಪ್ರತಿವಾದಿ ಸಂಖ್ಯೆ 7: ಕೆ. ನವೀನ್ ತಂದೆ ಕೆ. ರವೀಂದ್ರನಾಥ್ @ ಕೆ. ರವೀಂದ್ರನಾಥಗೌಡ, ವಯಸ್ಸು 39 ವರ್ಷ, ವಾಸ : ಹುಚ್ಚಂಗಿದುರ್ಗ ಹರಪನಹಳ್ಳಿ ತಾ।।, ವಿಜಯನಗರ ಜಿ।।

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿ ಪ್ರತಿವಾದಿಯರಿಗೆ ನೀಡಲಾದ ಸಾರ್ವಜನಿಕ ಪತ್ರಿಕಾ ಪ್ರಕಟಣಾ ನೋಟಿಸ್**

ಈ ದಾವೆಯ ಮೇಲ್ಕಂಡ ವಾದಿ ದಾವಣಗೆರೆ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಕಂಡ ಪ್ರತಿವಾದಿಯರ ವಿರುದ್ಧ ಸಮಾನ ಹಿಸ್ಸೆಗಾಗಿ ಪಾಲು ವಿಭಾಗದ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯದಿಂದ ಇದವರೆಗೂ ನೋಟೀಸ್ ಆದೇಶವಾದರೂ ಮತ್ತು ನ್ಯಾಯಾಲಯದ ಪ್ರಕ್ರಿಯೆ ಹಾಗೂ ಅಂಚೆ ಪತ್ರ ಮುಖೇನ ಮೇಲ್ಕಂಡ ಪ್ರತಿವಾದಿಯರಿಗೆ ನೀಡಿದರೂ ಉದ್ದೇಶಪೂರ್ವಕವಾಗಿ ಸ್ವೀಕರಿಸದೇ ಮತ್ತು ನ್ಯಾಯಾಲಯದ ಪ್ರಕ್ರಿಯೆಯಲ್ಲಿ ಹಾಜರಾಗದೇ ತಪ್ಪಿಸಿಕೊಳ್ಳುತ್ತಿರುವ ಪ್ರಯುಕ್ತ ನ್ಯಾಯಾಲಯಕ್ಕೆ ಹಾಜರಾಗಲು ಸದರಿ ದಾವೆಯ ಸಮನ್ಸನ್ನು ಪತ್ರಿಕಾ ಪ್ರಕಟಣೆಯ ಮೂಲಕ ಪ್ರಚುರಪಡಿಸುತ್ತಿದ್ದು, ಸದರಿ ದಾವೆಯ ಸಂಬಂಧ ನಿಮ್ಮ ತಕರಾರು, ಆಕ್ಷೇಪಣೆ ಏನಾದರೂ ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕವಾಗಲೀ ತಾ. 21.8.2024 ರಂದು ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ಏಕಪಕ್ಷೀಯವಾಗಿ ನಿಮ್ಮ ವಿರುದ್ಧ ನಿರ್ಣಯಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ನನ್ನ ದಸ್ಕತ್ತಿನೊಂದಿಗೆ ತಾ. 5.7.2024 ರಂದು ಆದೇಶ ನೀಡಲಾಗಿದೆ.

**ಸಹಿ/- ವಾದಿಯ ಪರ ವಕೀಲರು**
**ಯೋಗೇಶ್ವರಪ್ಪ ಆರ್. BA., LLB**
**ಸ್ಥಳ ; ದಾವಣಗೆರೆ.**
**ದಿನಾಂಕ : 03.07.2024**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು,**
**ಪ್ರಧಾನ ಹಿರಿಯ ಸಿವಿಲ್ ಮತ್ತು ಸಿಜೆಎಂ,**
**ನ್ಯಾಯಾಲಯ, ದಾವಣಗೆರೆ.**

# ವೈಚಾರಿಕತೆ ಹೆಸರಿನಲ್ಲಿ ಸಂಸ್ಕೃತಿ ಕಲುಷಿತ



**(1ನೇ ಪುಟದಿಂದ)** ಯಾವುದೇ ಸಂದೇಹವಿಲ್ಲ. ಆದ್ದರಿಂದಲೇ ಇಂದು ಎಷ್ಟೋ ಜನರು ಸಂಸ್ಕಾರ ಇಲ್ಲದ ಕಾರಣ, ಸಣ್ಣ ಸಣ್ಣ ಸಮಸ್ಯೆಗಳನ್ನು ಎದುರಿಸಲಾಗದೇ ಆತ್ಮಹತ್ಯೆಗೆ ಒಳಗಾಗುವಂತಹ ಅನೇಕ ಘಟನೆಗಳನ್ನು ಕಾಣುತ್ತಿದ್ದೇವೆ. ಆದ್ದರಿಂದ ಮನುಷ್ಯನಿಗೆ ಮಾನಸಿಕ ನೆಮ್ಮದಿ ಮತ್ತು ಸದೃಢ ಆರೋಗ್ಯ, ಸಮಚಿತ್ತದ ಮನಸ್ಸು ಲಭಿಸಬೇಕಾದರೆ ಇಷ್ಟಲಿಂಗ ಪೂಜೆಯನ್ನು ಮಾಡುವುದನ್ನು ರೂಢಿಸಿಕೊಂಡು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಆಚಾರ-ವಿಚಾರಗಳನ್ನು ಉಳಿಸಿಕೊಂಡು ಹೋಗಬೇಕು ಎಂದು ಹೇಳಿದರು.

ಹರಿಹರ ನಗರದಲ್ಲಿ ಹಿಂದಿನಿಂದಲೂ ಜಗದ್ಗುರುಗಳಾದ ರಂಭಾಪುರಿ ಪೀಠದ ಶ್ರೀ ವೀರಗಂಗಾಧರ ಸ್ವಾಮಿಗಳು, ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀಶೈಲ ಪೀಠದ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಸ್ವಾಮಿಗಳು ಹಾಗೂ ಶ್ರೀ ಉಮಾಪತಿ ಪಂಡಿತಾರಾಧ್ಯ ಸ್ವಾಮಿಗಳು ವಿಶೇಷ ಪೂಜಾ ಕಾರ್ಯಗಳನ್ನು ಮಾಡುತ್ತಾ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಜೊತೆಗೆ ಆಷಾಢ ಮಾಸದಲ್ಲಿ ನಡೆಯುವ ಕಾರ್ಯಗಳಿಗೆ ಇಲ್ಲಿನ ಅನೇಕ ಹಿರಿಯರು ಮತ್ತು ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಭಕ್ತರೂ ಸಹಕಾರ ಮಾಡಿಕೊಂಡು ಬಂದಿದ್ದಾರೆ ಎಂದು ಹೇಳಿದರು.

ಪೂಜೆಯ ನೇತೃತ್ವವನ್ನು ಮಳಲಿ ಸಂಸ್ಥಾನ ಮಠದ ಶ್ರೀ ಡಾ. ಗುರು ನಾಗಭೂಷಣ ಶಿವಾಚಾರ್ಯ ಸ್ವಾಮಿಗಳ ವಹಿಸಿದ್ದರು. ಈ ಸಂದರ್ಭದಲ್ಲಿ ವಜ್ರೇಶ್, ಪಂಚಾಕ್ಷರಿ, ಎನ್.ಇ ಸುರೇಶ್, ಕೊಟ್ರೇಶಪ್ಪ ಹಿರೇಬಿದರೆ, ಮಹೇಶ್ವರಪ್ಪ ಕೆ.ಜಿ. ಧೂಳೆಹೊಳೆ, ಮಹೇಶ್ವರಪ್ಪ, ಚಂದ್ರಪ್ಪ ಸಮಾಳ , ಅಣ್ಣಪ್ಪ ಪೂಜಾರ್ ಹೊಸಪೇಟೆ, ಹೊಳಬಸಯ್ಯ, ಕರಿಬಸಪ್ಪ ಕುಂಬಾರ, ಷಣ್ಮುಖಪ್ಪ, ಬಿಳೆಬಾಳ ಚಂದ್ರಶೇಖರ್, ತೋಟಪ್ಪ, ಶಿವಯೋಗಿ ಸ್ವಾಮಿ ಕತ್ತಲಗೇರಿ, ಸಿದ್ದಲಿಂಗಸ್ವಾಮಿ, ಕುಮಾರಸ್ವಾಮಿ, ಹಾಲಸ್ವಾಮಿ, ಹಿರೇಮಠ ಸ್ವಾಮಿ, ಹೊಸಪೇಟೆ ಕುಂಬಾರ ಮಹೇಶ್ ಇತರರು ಹಾಜರಿದ್ದರು

# ಗಂಡು - ಹೆಣ್ಣು ಭೇದವಿಲ್ಲದೆ ಮಾದಕ ವ್ಯಸನಕ್ಕೆ ಬಲಿ

## ಮಾ.ಸ.ಬ ಕಾಲೇಜಿನ ಜಾಗೃತಿ ಕಾರ್ಯಕ್ರಮದಲ್ಲಿ ಇನ್‌ಸ್ಪೆಕ್ಟರ್ ಸಂತೋಷ್ ಪಾಟೀಲ್

ದಾವಣಗೆರೆ,ಜು.9- ಮಾದಕ ವ್ಯಸನವು ದೊಡ್ಡ ಪಿಡುಗಾಗಿ ಕಾಡುತ್ತಿದ್ದು, ಹೆಣ್ಣು-ಗಂಡು ಎಂಬ ಭೇದವಿಲ್ಲದೇ ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ. ಹಾಗಾಗಿ ಮಾದಕ ವ್ಯಸನದಿಂದ ದೂರವಿರಲು ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು ಎಂದು ರೈಲ್ವೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಂತೋಷ್ ಪಾಟೀಲ್ ಸಲಹೆ ನೀಡಿದರು.

ನಗರದ ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಭಾಗದಿಂದ ಹಮ್ಮಿಕೊಂಡಿದ್ದ ಮಾದಕ ವ್ಯಸನ ಮತ್ತು ಸೈಬರ್ ಅಪರಾಧ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದುಶ್ಚಟಗಳಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತವೆ. ಜೊತೆಗೆ ಮತ್ತೆ ಮತ್ತೆ ಬೇಕೆನಿಸುತ್ತವೆ. ಯುವಜನರು ಮದ್ಯಪಾನ, ಗಾಂಜಾ, ಡ್ರಗ್ಸ್, ತಂಬಾಕು ಸೇವನೆ ಇತ್ಯಾದಿಗಳಿಗೆ ತಮ್ಮ ಜೀವನವನ್ನು ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿ ಕಾಲೇಜಿನ ಸುತ್ತ ಮುತ್ತಲಿನ ಪ್ರದೇಶದಲ್ಲಿ ಇಂತಹ ಚಟುವಟಿಕೆಗಳು ಕಂಡುಬಂದರೆ ತಕ್ಷಣ ಸಂಬಂಧಿತ





ಪೊಲೀಸ್ ಠಾಣೆ ಅಥವಾ ಕಂಟ್ರೋಲ್ ರೂ. ನಂ. 112ಕ್ಕೆ ಕರೆ ಮಾಡಿ ಮಾಹಿತಿ ನೀಡಲು ವಿದ್ಯಾರ್ಥಿಗಳಿಗೆ ಅವರು ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಿ.ಸಿ. ನೀಲಾಂಬಿಕಾ ಮಾತನಾಡಿ, ಮಾದಕ ವಸ್ತುಗಳ ಬಳಕೆ ಹೆಚ್ಚಾಗಿ ಹದಿಹರೆಯದ ವಯಸ್ಸಿನಲ್ಲಿ ಆರಂಭವಾಗುತ್ತದೆ. ವಿದ್ಯಾರ್ಥಿಗಳು ಮಾದಕ ವಸ್ತುಗಳ ದುಷ್ಪರಿಣಾಮಗಳನ್ನು ಅರಿತು, ಅವುಗಳಿಂದ ದೂರವಿದ್ದು ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬೇಕು ಎಂದು ತಿಳಿಸಿದರು.

ಎ.ಎಸ್.ಐ ನಾಗರಾಜ.ಜಿ, ಪೊಲೀಸ್ ಪೇದೆಗಳಾದ ಮಂಜುನಾಥ್ ಮತ್ತು ಹರೀಶ್ ಉಪಸ್ಥಿತರಿದ್ದರು. ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಆರ್. ರಾಘವೇಂದ್ರ ಸ್ವಾಗತಿಸಿದರು. ಡಾ. ಓ. ಪ್ರವೀಣ್ ಕುಮಾರ್ ವಂದಿಸಿದರು, ಕುಮಾರಿ ಆಶಾ ನಿರೂಪಿಸಿದರು.

# ಸಂವಿಧಾನದ ಬಗ್ಗೆ ರಾಹುಲ್ 'ಆಸ್ಕರ್' ನಟನೆ: ರಾಮರಾವ್

ನವದೆಹಲಿ, ಜು. 9 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಂವಿಧಾನ ರಕ್ಷಣೆ ಕುರಿತು ಆಸ್ಕರ್ ಹಂತದ ನಟನೆ ಮಾಡುತ್ತಿದ್ದಾರೆ ಎಂದು ಬಿ.ಆರ್.ಎಸ್. ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಲೇವಡಿ ಮಾಡಿದ್ದಾರೆ. ತೆಲಂಗಾಣದ ಬಿ.ಆರ್.ಎಸ್. ಪಕ್ಷದ ಹಲವು ಶಾಸಕರು ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದ ನಂತರ ಅವರು ಈ ಹೇಳಿಕೆ ನೀಡಿದ್ದಾರೆ.

ಶಾಸಕರ ಪಕ್ಷಾಂತರದ ಬಗ್ಗೆ ಕಾನೂನು ಹೋರಾಟಕ್ಕೆ ಸಿದ್ಧವಾಗುತ್ತಿರುವುದಾಗಿ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸುವುದಾಗಿ ರಾಮರಾವ್ ಹೇಳಿದ್ದಾರೆ.

ಬಿ.ಆರ್.ಎಸ್. ಪಕ್ಷದಿಂದ ಇತ್ತೀಚೆಗೆ ಏಳು ಶಾಸಕರು, ಆರು ಪರಿಷತ್ ಸದಸ್ಯರು ಹಾಗೂ ರಾಜ್ಯಸಭಾ ಸದಸ್ಯರೊಬ್ಬರು ಕಾಂಗ್ರೆಸ್‌ಗೆ ಜಿಗಿದಿದ್ದರು. ಈ ಹಿಂದೆಯೂ ಹಲವು ಶಾಸಕರು ಕಾಂಗ್ರೆಸ್ ಪಕ್ಷ ಸೇರಿದ್ದರು.

ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿರುವ ಕೆ.ಟಿ.ಆರ್., ಚುನಾವಣಾ ಆಯೋಗ, ರಾಷ್ಟ್ರಪತಿ, ರಾಜ್ಯಸಭಾಧ್ಯಕ್ಷರು ಹಾಗೂ ಲೋಕಸಭಾಧ್ಯಕ್ಷರನ್ನು ಭೇಟಿ ಮಾಡಿ ದೂರು ನೀಡುವುದಾಗಿ ಹೇಳಿದರು.

ಪಕ್ಷಾಂತರ ತಡೆಯಲು ಸಂವಿಧಾನದ 10ನೇ ಪರಿಚ್ಛೇದಕ್ಕೆ ತಿದ್ದುಪಡಿ ತರುವುದಾಗಿ ಕಾಂಗ್ರೆಸ್ ಪಕ್ಷ ಈ ಹಿಂದೆ ತಿಳಿಸಿತ್ತು. ಆದರೆ ಆ ಪಕ್ಷವೇ ಈಗ ಪಕ್ಷಾಂತರದಲ್ಲಿ ತೊಡಗಿದೆ ಎಂದು ರಾಮರಾವ್ ಹೇಳಿದ್ದಾರೆ. ಒಂದೆಡೆ ರಾಹುಲ್ ಗಾಂಧಿ ಅವರು ಸಂವಿಧಾನದ ಪ್ರತಿಯನ್ನು ಪ್ರದರ್ಶಿಸುತ್ತಾರೆ. ಮತ್ತೊಂದೆಡೆ ಅವರ ಪಕ್ಷವೇ ಸಂವಿಧಾನಕ್ಕೆ ಮಸಿ ಬಳಿಯುತ್ತಿದೆ. ಸಂವಿಧಾನ ರಕ್ಷಣೆಯ ಬಗ್ಗೆ ರಾಹುಲ್ ಗಾಂಧಿ ಅವರು ಆಸ್ಕರ್ ಹಂತದ ನಟನೆ ಮಾಡುತ್ತಿದ್ದಾರೆ ಎಂದು ರಾಮರಾವ್ ಲೇವಡಿ ಮಾಡಿದರು.

ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳಿಂದ ಪೀಡನೆಗೆ ಗುರಿಯಾದ ಎಲ್ಲಾ ಪಕ್ಷಗಳು ಜೊತೆಯಾಗಿ ಪಕ್ಷಾಂತರದ ವಿರುದ್ಧ ಹೋರಾಟ ನಡೆಸಬೇಕಿದೆ ಎಂದು ಅವರು ಹೇಳಿದ್ದಾರೆ.

ಬಿ.ಆರ್.ಎಸ್. ಶಾಸಕರ ಪಕ್ಷಾಂತರ ಕುರಿತ ಅರ್ಜಿ ಈಗಾಗಲೇ ತೆಲಂಗಾಣ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ ಎಂದವರು ತಿಳಿಸಿದರು. 2020ರಲ್ಲಿ ಸುಪ್ರೀಂಕೋರ್ಟ್ ಹೊರಡಿಸಿರುವ ಆದೇಶದ ಪ್ರಕಾರ ವಿಧಾನಸಭಾಧ್ಯಕ್ಷರು ಪಕ್ಷಾಂತರಗೊಂಡ ಸದಸ್ಯರ ಬಗ್ಗೆ ಮೂರು ತಿಂಗಳಲ್ಲಿ ನಿರ್ಧರಿಸಬೇಕಿದೆ. ವಿಧಾನಸಭಾಧ್ಯಕ್ಷರು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳದಿದ್ದರೆ ಸುಪ್ರೀಂ ಕೋರ್ಟ್ ಮೊರೆ ಹೋಗುತ್ತೇವೆ ಎಂದವರು ತಿಳಿಸಿದರು.

# ಮಕ್ಕಳನ್ನು ಶಾಲೆಗೆ ಕರೆ ತನ್ನಿ

**(1ನೇ ಪುಟದಿಂದ)** ತನ್ನಿ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬಾಲ್ಯ ವಿವಾಹ ಮೇಲ್ವಿಚಾರಣಾ ಸಮಿತಿಗಳನ್ನು, ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಾವಲು ಸಮಿತಿಗಳ ಬಲವರ್ಧನೆಗೆ ಖಡಕ್ ಸೂಚನೆ ನೀಡಿದರು. 4,180 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 9,411 ಸಹಾಯಕಿಯರ ಖಾಲಿ ಇರುವ ಹುದ್ದೆಗಳನ್ನು ಡಿಸೆಂಬರ್ ಒಳಗೆ ಭರ್ತಿ ಮಾಡಿ. ನಗರ ಪ್ರದೇಶದಲ್ಲಿ ಸಹಾಯಕಿಯರ ಗೌರವ ಧನ ಹೆಚ್ಚಳಕ್ಕೆ ಪ್ರಸ್ತಾವನೆ ಸಲ್ಲಿಸಿ ಎಂದು ಸೂಚಿಸಿದರು.

ಸಿಂಧುತ್ವ ಪ್ರಮಾಣ ಪತ್ರ ವಿಚಾರದಲ್ಲಿ ಅಸಡ್ಡೆ ಮಾಡಬೇಡಿ ಎಂದು ಕಿವಿಮಾತು ಹೇಳಿದ ಮುಖ್ಯಮಂತ್ರಿ ಅವರು, ಅರ್ಹರಿದ್ದರೆ ತಕ್ಷಣ ಅವರಿಗೆ ಪ್ರಮಾಣ ಪತ್ರ ನೀಡಿ, ಇದಕ್ಕಾಗಿ ಬಂದವರನ್ನು ಸತಾಯಿಸಬೇಡಿ ಎಂದರು.

ಉಪವಿಭಾಗಾಧಿಕಾರಿಗಳ ನೇತೃತ್ವದಲ್ಲಿ ದೌರ್ಜನ್ಯ ತಡೆ ಸಮಿತಿ ಸಭೆಗಳನ್ನು ನಿಯಮಿತವಾಗಿ ನಡೆಸದಿರುವುದಕ್ಕೆ ಮುಖ್ಯಮಂತ್ರಿ ಗರಂ ಆದರು. ಗಂಗಾಕಲ್ಯಾಣ ಯೋಜನೆಯಡಿ ವಿದ್ಯುದೀಕರಣಕ್ಕೆ ನೋಂದಾಯಿಸಿದ ಹಾಗೂ ಬಾಕಿ ಇರುವ ಅರ್ಜಿಗಳನ್ನು ತಕ್ಷಣ ವಿಲೇವಾರಿ ಮಾಡಿ ಎಂದು ಆದೇಶಿಸಿದರು.

# ಬಂಜಾರ ಸಮುದಾಯದ ಅಭಿವೃದ್ಧಿಗೆ ಶ್ರಮಿಸುವೆ



## ಜಗಳೂರಿನ ಕಾರ್ಯಕ್ರಮದಲ್ಲಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ್ ಭರವಸೆ

ಜಗಳೂರು, ಜು. 9 - ದಶಕಗಳ ಸಾಮಾಜಿಕ, ರಾಜಕೀಯ ಸೇವೆಯನ್ನು ಗುರುತಿಸಿ ಸರ್ಕಾರ ನಿಗಮದ ಅಧ್ಯಕ್ಷ ಸ್ಥಾನಮಾನ ನೀಡಿದ್ದು. ಅರ್ಹರಿಗೆ ಸೌಲಭ್ಯ ಒದಗಿಸುವ ಮೂಲಕ ಬಂಜಾರ ಸಮುದಾಯದ ಸರ್ವತೋಮುಖ ಅಭಿವೃದ್ದಿಗೆ ಶ್ರಮಿಸುವೆ ಎಂದು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ್ ಭರವಸೆ ನೀಡಿದರು.

ಪಟ್ಟಣದ ಜೆಎಂಎಫ್ ಸಿ ಮತ್ತು ಸಿವಿಲ್ ನ್ಯಾಯಾಲಯದ ಸಭಾಂಗಣದಲ್ಲಿ ತಾಲ್ಲೂಕು ವಕೀಲರ ಸಂಘದಿಂದ ನೂತನ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

'ವಕೀಲ ವೃತ್ತಿಯಿಂದ ಆರಂಭವಾದ ನನ್ನ ಜೀವನ ಸ್ಥಳೀಯವಾಗಿ ಸಾಕಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಿ ನ್ಯಾಯ ಕಲ್ಪಿಸಿರುವೆ. ವಕೀಲ ವೃತ್ತಿಯ ಜೊತೆಗೆ ಸಮಾಜವಾದಿ ಸಿದ್ಧಾಂತದೊಂದಿಗೆ 1970 ರಲ್ಲಿ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆಗೊಂಡ ನಾನು ಹಲವಾರು ಬಾರಿ ರಾಜಕೀಯ ಏಳು ಬೀಳು ಕಂಡಿರುವೆ. ಜಿಲ್ಲೆಯ ಸಂಸದರ, ಸಚಿವರ, ಶಾಸಕರುಗಳ ಸಹಕಾರ ಹಾಗೂ ಬಂಜಾರ ಸಮುದಾಯದ ಮುಖಂಡರುಗಳ ಬೆಂಬಲದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನನ್ನನ್ನು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷನನ್ನಾಗಿ ನೇಮಿಸಿದ್ದಾರೆ ಎಂದರು.

ತಾಲ್ಲೂಕಿನಲ್ಲಿ ನಾನು ವಕೀಲನಾಗಿ ಸೇವೆಗೈಯ್ಯುತ್ತಿದ್ದ ವೇಳೆ ಹಲವಾರು ವಕೀಲ ಸ್ನೇಹತ್ವದ ಜೊತೆಗೆ ಹೋರಾಟ ನಡೆಸಿದ್ದರ ಪರಿಣಾಮ ವಿಶಾಲವಾದ ಜಾಗದಲ್ಲಿ ಸುಸಜ್ಜಿತ ಕಟ್ಟಡದೊಂದಿಗೆ ಕೋರ್ಟ್ ನಿರ್ಮಾಣಗೊಂಡಿದೆ. ಹಲವಾರು ಪ್ರಕರಣಗಳ ಕಲಾಪಗಳು ಸ್ಥಳೀಯ ಕೋರ್ಟ್ ನಲ್ಲಿ ಇತ್ಯರ್ಥಗೊಳ್ಳಲು, ಬಡಜನರಿಗೆ ಅನುಕೂಲವಾಗಿದೆ ಎಂದರು.

ವಕೀಲರ ಸಂಘದ ತಾಲ್ಲೂಕು ಅಧ್ಯಕ್ಷ ಮರೇನಹಳ್ಳಿ ಟಿ. ಬಸವರಾಜ್ ಮಾತನಾಡಿ, ಬರಪೀಡಿತ ತಾಲ್ಲೂಕಿನಲ್ಲಿ ವಕೀಲ ವೃತ್ತಿಯಿಂದ ಆಗಮಿಸಿರುವವರಿಗೆ ಸೂಕ್ತ ರಾಜಕೀಯ ಸ್ಥಾನಮಾನ ಲಭಿಸಿರುವುದು ವಕೀಲರ ವೃತ್ತಿ ಗೌರವ ಹಾಗೂ ಸ್ಫೂರ್ತಿ, ಕಾಂಗ್ರೆಸ್ ಪಕ್ಷದ ಆಡಳಿತ ಸಮಾನತೆ, ಸಾಮಾಜಿಕ ನ್ಯಾಯ ಕಲ್ಪಿಸಿದೆ ಎಂದು ಹೇಳಿದರು.

ಸಂದರ್ಭದಲ್ಲಿ ಸರ್ಕಾರಿ ಸಹಾಯಕ ಅಭಿಯೋಜಕ ಮಂಜುನಾಥ್, ತಾಲ್ಲೂಕು ವಕೀಲರ ಸಂಘದ ಕಾರ್ಯದರ್ಶಿ ಎ.ಕೆ. ಪರುಸಪ್ಪ, ವಕೀಲರಾದ ಕೆ.ಎನ್. ಪರಮೇಶ್ವರಪ್ಪ, ಕೆ.ಎಂ. ಬಸವರಾಜಪ್ಪ, ರುದ್ರೇಶ್, ಡಿ.ವಿ. ನಾಗಪ್ಪ, ಬಸವರಾಜಪ್ಪ, ಓಂಕಾರೇಶ್ವರ, ಪಟೇಲ್, ಲಕ್ಷ್ಮಣ್, ಆರ್.ಓಬಳೇಶ್, ಸುನಿಲ್, ನಾಗೇಶ್ ಮುಂತಾದವರು ಇದ್ದರು.

# ರಸ್ತೆಗಿಳಿದು ಸುರಕ್ಷತೆ ಪರಿಶೀಲಿಸಲು ಸೂಚನೆ

**(1ನೇ ಪುಟದಿಂದ)** ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳು ಅಪಘಾತ ಪ್ರಮಾಣ ತಡೆಯಲು ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರಬೇಕು. ಕಂದಾಯ, ಪೊಲೀಸ್, ಸಾರಿಗೆ, ನಗರಪಾಲಿಕೆ ಸಮನ್ವಯದಿಂದ ಕಾರ್ಯ ನಿರ್ವಹಿಸಿದರೆ ಅಪಘಾತಗಳನ್ನು ನಿಯಂತ್ರಿಸಲು ಸಾಧ್ಯ ಎಂದು ಹೇಳಿದರು.

ರಸ್ತೆ ಸುರಕ್ಷತಾ ಸಪ್ತಾಹಗಳು ಕಾಟಾಚಾರಕ್ಕೆ ನಡೆಯಬಾರದು, ಮುಂಜಾಗರೂಕತಾ ಕ್ರಮ ಕೈಗೊಂಡರೆ ಹಲವು ಅಪಘಾತಗಳನ್ನು ತಡೆಯಬಹುದಾಗಿದೆ. ಹಾಟ್‌ಸ್ಪಾಟ್‌ಗಳನ್ನು ಗುರುತಿಸಿ, ಹೆದ್ದಾರಿಗಳಲ್ಲಿ ಆಂಬ್ಯುಲೆನ್ಸ್, ಟ್ರಾಮಾ ಸೆಂಟರ್ ನೆಟ್‌ವರ್ಕ್ ವ್ಯವಸ್ಥೆ ಮಾಡಬೇಕು ಎಂದರು.

# ರಾಜ್ಯ ಹೆದ್ದಾರಿ ಯೋಜನೆಗಳ ಕಾಮಗಾರಿ ತ್ವರಿತಗೊಳಿಸಿ : ಗಡ್ಕರಿಗೆ ಕುಮಾರಸ್ವಾಮಿ ಮನವಿ



ಬೆಂಗಳೂರು, ಜು. 9 - ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿನ ಕೆಲವು ತೊಡಕುಗಳನ್ನು ಸರಿಪಡಿಸುವಂತೆ ಕೇಂದ್ರ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಮಾಡಿದ್ದಾರೆ.

ದೆಹಲಿಯಲ್ಲಿಂದು ಗಡ್ಕರಿ ಅವರನ್ನು ಭೇಟಿ ಮಾಡಿದ ಮಂಡ್ಯ ಸಂಸದರೂ ಆಗಿರುವ ಕುಮಾರಸ್ವಾಮಿ, ಹೆದ್ದಾರಿ ನಿರ್ಮಾಣದ ನಂತರ ಕೆಲವು ಭಾಗಗಳಲ್ಲಿ ಉಂಟಾಗಿರುವ ಸಮಸ್ಯೆಗಳಿಂದ ಮಳೆ ಬಂದಾಗ ನೀರು ಸರಾಗವಾಗಿ ಹರಿದು ಹೋಗದೇ ವಾಹನ ಸಂಚಾರಕ್ಕೆ ತೀವ್ರ ತೊಡಕಾಗಿದೆ ಎಂದರು.

ರಸ್ತೆಯ ಕೆಲವು ಭಾಗಗಳಲ್ಲಿನ ತಿರುವುಗಳಿಂದ ಸಮಸ್ಯೆ ಉಂಟಾಗಿದ್ದು, ಸರ್ವೀಸ್ ರಸ್ತೆಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸುವಂತೆ ಮತ್ತು ಹಳೆ ರಸ್ತೆಗಳನ್ನೂ ಅಭಿವೃದ್ಧಿ ಪಡಿಸುವಂತೆ ಮನವಿ ಮಾಡಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಬಾಕಿ ಇರುವ ಸಾರಿಗೆ ಹೆದ್ದಾರಿ ಯೋಜನೆಗಳನ್ನು ಶೀಘ್ರ ಕಾರ್ಯಗತಗೊಳಿಸುವುದು, ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತೆ ಮಾಡಿದ ಮನವಿಗೆ ಸ್ಥಳದಲ್ಲೇ ಸ್ಪಂದಿಸಿದ ಗಡ್ಕರಿ ಅವರು, ರಸ್ತೆಯ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದಲ್ಲದೆ, ಬೆಂಗಳೂರು-ಚೆನ್ನೈ ನಡುವಿನ ಹೊಸ ರಾಷ್ಟ್ರೀಯ ಹೆದ್ದಾರಿಯನ್ನು ಡಿಸೆಂಬರ್‌ನಲ್ಲಿ ರಾಷ್ಟ್ರಕ್ಕೆ ಸಮರ್ಪಣೆ ಮಾಡುವುದಾಗಿ ತಿಳಿಸಿದ್ದಾರೆ.

# ಕರಾಟೆ ಚಾಂಪಿಯನ್ ಸ್ಪರ್ಧೆಯಲ್ಲಿ ಸಪ್ತಗಿರಿ ಶಾಲೆ ವಿದ್ಯಾರ್ಥಿಗಳು ಪ್ರಥಮ



ದಾವಣಗೆರೆ, ಜು. 9- ನಗರದ ಕುಂದುವಾಡ ರಸ್ತೆಯ ಸಪ್ತಗಿರಿ ವಿದ್ಯಾಲಯ ಹಾಗೂ ಧಾರವಾಡದ ಗೋಲ್ಡನ್ ಕರಾಟೆ ಕ್ರೀಡಾ ಸಂಸ್ಥೆ ಸಂಯುಕ್ತಾಶ್ರಯದಲ್ಲಿ 13 ರಿಂದ 15 ವರ್ಷದ ಒಳಗಿನ ವಿದ್ಯಾರ್ಥಿಗಳಿಗೆ ಈಚೆಗೆ ಏರ್ಪಡಿಸಿದ್ದ ಎರಡನೇ ರಾಷ್ಟ್ರೀಯ ಮಟ್ಟದ ಇನ್ವಿಟೇಷನಲ್ ಕರಾಟೆ ಚಾಂಪಿಯನ್ ಸ್ಪರ್ಧೆಯಲ್ಲಿ ಸಪ್ತಗಿರಿ ಶಾಲೆಯ ಜಿ.ಎಸ್. ಚಾರಿತ್ರಿಯ, ಕೆ.ಎನ್. ವೇದ, ಸಾನ್ವಿ ಎಂ. ಕುಮಾರ್ ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.

ಈ ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ, ಪ್ರಾಚಾರ್ಯರು, ಬೋಧಕ, ಬೋಧಕೇತರ ವರ್ಗದವರು ಅಭಿನಂದಿಸಿದ್ದಾರೆ.

# ದಿವ್ಯಾಂಗ ಕಾಯ್ದೆ ಜಾರಿಗೆ ತರದ ಕೇಂದ್ರ : ತರಾಟೆ

**(1ನೇ ಪುಟದಿಂದ)** ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ಕೇಂದ್ರ ಸರ್ಕಾರ ದಿವ್ಯಾಂಗರಿಗೆ ಸಂಬಂಧಿಸಿದ 1995ರ ಕಾಯ್ದೆಯನ್ನು ಸಂಪೂರ್ಣವಾಗಿ ಜಾರಿಗೆ ತಂದಿದ್ದರೆ ದೃಷ್ಟಿ ದಿವ್ಯಾಂಗ ಅಭ್ಯರ್ಥಿಗಳು ತಮ್ಮ ಹಕ್ಕಿಗಾಗಿ ಸುಪ್ರೀಂ ಕೋರ್ಟ್‌ವರೆಗೆ ಬರುವ ಅಗತ್ಯವೇ ಇರುತ್ತಿರಲಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಪಂಕಜ್ ಕುಮಾರ್ ಶ್ರೀವಾಸ್ತವ ಅವರು ದೃಷ್ಟಿ ಮಾಂದ್ಯರಾಗಿದ್ದರು. ಅವರು 2008ರ ನಾಗರಿಕ ಸೇವಾ ಪರೀಕ್ಷೆಗೆ ಹಾಜರಾಗಿದ್ದರು. ಅವರು ಐಎಎಸ್ ಹಾಗೂ ಐಆರ್‌ಎಸ್ ಸೇವೆಗಳಿಗೆ ಆದ್ಯತೆ ನೀಡಿದ್ದರು. ಲಿಖಿತ ಹಾಗೂ ಸಂದರ್ಶನ ಪೂರ್ಣಗೊಳಿಸಿದ ನಂತರ ಅವರಿಗೆ ನೇಮಕಾತಿ ನಿರಾಕರಿಸಲಾಗಿತ್ತು.

ನಂತರ ಅವರು 2010ರಲ್ಲಿ ಕೇಂದ್ರ ಆಡಳಿತಾತ್ಮಕ ನ್ಯಾಯಾಧೀಕರಣದ ಎದುರು ಅರ್ಜಿ ದಾಖಲಿಸಿದ್ದರು. ಶ್ರೀವಾಸ್ತವ ಅವರನ್ನು ಸೇವೆಗೆ ಸೇರ್ಪಡೆ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸಲು ನ್ಯಾಯಾಧಿಕರಣವೂ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಆದರೆ, ಅವರ ಹೆಸರು 2008ರ ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲ ಎಂದು ಪರೀಕ್ಷೆ ನಡೆಸಿದ್ದ ಯು.ಪಿ.ಎಸ್.ಸಿ. ತಿಳಿಸಿತ್ತು. ನಂತರ ಶ್ರೀವಾಸ್ತವ ಅವರು ಮತ್ತೆ ನ್ಯಾಯಾಧೀಕರಣದ ಬಳಿ ಅರ್ಜಿ ದಾಖಲಿಸಿದ್ದರು. .

ನೇಮಕ ಮಾಡಿಕೊಳ್ಳುವಂತೆ ನ್ಯಾಯಾಧೀಕರಣ ಆದೇಶಿಸಿದ್ದನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು. ಆದರೆ ಹೈಕೋರ್ಟ್ ಅರ್ಜಿ ತಳ್ಳಿ ಹಾಕಿತ್ತು. ನಂತರ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು.


**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು.
81056 99985
89715 04492
99004 67508

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟು ಮಾರಾಟಕ್ಕಿದೆ**
ಎಂ.ಸಿ.ಸಿ. ಬಿ ಬ್ಲಾಕ್ ನ ಹಾರ್ಟ್ ಹಾಸ್ಪಿಟಲ್ ರಸ್ತೆಗೆ ಪೂರ್ವಮುಖವಾಗಿ 47x60 ಅಡಿ ಅಳತೆ ಇದ್ದು, ಸೊತ್ತಿನ ದಾಖಲೆಯಲ್ಲಿ ಕಡಿಮೆ ಇರುತ್ತದೆ. ದಾಖಲೆಯಲ್ಲಿ ತೋರಿಸಿದ ಅಳತೆಗೆ ವ್ಯಾಪಾರಕ್ಕೆ ಕೊಡಲಾಗುತ್ತದೆ.
Mohan Real Estate Agencies
97424 34049

**Property Hub**
• EC
• E-swathu
• Building Licence
• Khatha Change
96118 66449

**ಹುಡುಗರು ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಇರುವ ಮೆಗಾ ಮಾರ್ಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 10 ರಿಂದ ರಾತ್ರಿ 9 ರವರೆಗೆ. ಮಧ್ಯಾಹ್ನ ಊಟದ ಜೊತೆ ಟೀ ಮತ್ತು ಸ್ನ್ಯಾಕ್ಸ್ ವ್ಯವಸ್ಥೆ ಇದೆ. (12,000 ಸಂಬಳ)
81340 34264, 81975 17215

**ಮನೆ ಲೀಸ್‌ಗೆ ಇದೆ**
ಮೊದಲನೆಯ ಮಹಡಿ, ಉತ್ತರದ ಬಾಗಿಲು, ಡಬಲ್ ಬೆಡ್ ರೂಮ್, ಬೋರ್ ವೆಲ್, ಮುನ್ಸಿಪಲ್ ನೀರಿನ ಸೌಲಭ್ಯವಿರುವ ಹೊಸ ಮನೆ, ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ, 4ನೇ ಕ್ರಾಸ್, 4ನೇ ಅಡ್ಡ ರಸ್ತೆ, ಸೋಮೇಶ್ವರ ಆಸ್ಪತ್ರೆ ಹಿಂಭಾಗ.
78489 82895

**ಬೇಕಾಗಿದ್ದಾರೆ**
ಸ್ವೀಟ್ಸ್ ಮತ್ತು ಬೇಕರಿಯಲ್ಲಿ ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಮೊ : 73377 24694

**ಗೋಡೌನ್ ಬಾಡಿಗೆಗೆ**
'ಶ್ರೀ ವೆಂಕಟೇಶ್ವರ ರೈಸ್ ಮಿಲ್' ಚನ್ನಗಿರಿ ರಸ್ತೆಯಲ್ಲಿರುವ ತ್ಯಾವಣಿಗಿ ಹತ್ತಿರ ರೋಡ್ ಪಕ್ಕದಲ್ಲಿರುವ 64HB Power ಇರುವ 84x88 ಗೋಡೌನ್ ಬಾಡಿಗೆಗಿದೆ. ಉಪಯೋಗ : ಮೆಕ್ಕೆಜೋಳ, ಅಡಿಕೆ ಪ್ಲೇಟ್ ತಯಾರು ಮಾಡಲು ಕಣ / ಗೋಡೌನ್ ಬಾಡಿಗೆಗಿದೆ.
99451 59582

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 6ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ.
(1550/- ಚದುರ ಅಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ.
98452 36274

**ಕಾರ್ನರ್ ನಿವೇಶನ ಮಾರಾಟಕ್ಕಿದೆ**
ವಾಣಿಜ್ಯ ಹಾಗೂ ಗೃಹ ಉಪಯೋಗಕ್ಕೆ ಅನುಕೂಲವಾಗಿರುವ ಪಶ್ಚಿಮ ಮತ್ತು ದಕ್ಷಿಣ ಕಾರ್ನರ್ 600 ಚದುರ ಅಡಿ (40x15) ಶುದ್ಧ ಮಾಲೀಕತ್ವದ ನಿವೇಶನ 23.50 ಲಕ್ಷ ರೂ.ಗಳಿಗೆ ಲಭ್ಯವಿದೆ.
81054 25694
79755 95836

**ಬೇಕಾಗಿದ್ದಾರೆ**
ಕನ್ನಡ ಮಾಧ್ಯಮಕ್ಕೆ ಬಿ.ಎ., ಬಿ.ಎಡ್. ಆಗಿರುವ ಶಿಕ್ಷಕಿ ಬೇಕಾಗಿದ್ದಾರೆ (ಸಮಾಜ ವಿಜ್ಞಾನ)
ನಿಟ್ಟುವಳ್ಳಿ, ದಾವಣಗೆರೆ
99807 55858

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಅಡಿಕೆ ಬೇಯಿಸಲು ಕಣ ಬಾಡಿಗೆಗೆ**
ಚನ್ನಗಿರಿ ರಸ್ತೆಯಲ್ಲಿರುವ ತ್ಯಾವಣಿಗೆ ಹತ್ತಿರ ಮತ್ತಿ ರೈಸ್‌ಮಿಲ್ ಆವರಣದಲ್ಲಿ ಶೆಡ್ ಇದ್ದು, ಅಡಿಕೆ ಬೇಯಿಸಿ, ಒಣಗಿಸಲು ಕಣ ಯೋಗ್ಯವಾಗಿದೆ. ಈ ಕಣ ಬಾಡಿಗೆ ಆಧಾರದಲ್ಲಿ ಕೊಡಲಾಗುವುದು.
ತೆಂಗಿನ ಸಸಿಗಳು ಸಿಗುತ್ತವೆ.
99451 59582

**ಸೈಟುಗಳು ಮಾರಾಟಕ್ಕಿವೆ**
ಬನಂಶಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**Tele Caller (ladies)**
(Attractive Salary + incentives)
89700 66666

**ಬೇಕಾಗಿದ್ದಾರೆ**
ಸಸ್ಯಹಾರಿ ಅಡುಗೆ ಮಾಡುವ ಆಯಾ ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ
5ನೇ ಮೇನ್, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ.
98804 36414, 98451 40948

**ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿ ಉತ್ತರ ಬಾಗಿಲು 2 ಬೆಡ್ ರೂಮ್ ಇರುವ ಬೋರ್ ವೆಲ್ ಮತ್ತು ಮುನ್ಸಿಪಲ್ ನೀರಿನ ಸೌಲಭ್ಯ ಇರುವ ಮನೆ. ಚಿಕ್ಕಮಣಿ ದೇವರಾಜ್ ಅರಸ್ ಬಡಾವಣೆ, ನಿಟ್ಟುವಳ್ಳಿ.
87628 79110

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಹಿಂದೂ ವಧು-ವರ ಅನ್ವೇಷಣೆ ಕೇಂದ್ರ**
ಮೊದಲನೆಯ ಮದುವೆ, ಎರಡನೇ ಮದುವೆ ವಧು-ವರಗಳಿಗೆ
ಸಂಪರ್ಕಿಸಿ :
86184 74929

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಮಹಿಳಾ ನರ್ಸ್ ಬೇಕಾಗಿದ್ದಾರೆ. ಸಮಯ - ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ. ಸಂಪರ್ಕಿಸಿ :
98808 51871

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ದಾವಣಗೆರೆ ನಗರದಲ್ಲಿ ನೂತನವಾಗಿ ಪ್ರಾರಂಭವಾಗುತ್ತಿರುವ ಹೋಟೆಲ್‌ಗೆ ಅಡುಗೆ ಭಟ್ಟರು ಬೇಕಾಗಿದ್ದಾರೆ.
(South Indian Only) Conact :
90367 34919

**ERA GROUP CAMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification : SSLC to Degree
7000K to 9000K+ Incentives.
ಸ್ಥಳ : KR Market Davanagere.
95350 51589, 78670 75786

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ದಾವಣಗೆರೆ, ಸುಪ್ರಸಿದ್ಧ ಲಡ್ಜನಲ್ಲಿ ಕೆಲಸ ಮಾಡಲು
**ಬೇಕಾಗಿದ್ದಾರೆ**
ರಿಸೆಪ್ಶನಿಸ್ಟ್ (ಪುರುಷ/ಮಹಿಳೆ)
ರೂಮ್ ಬಾಯ್
ಹೌಸ್ ಕೀಪಿಂಗ್
ಆಸಕ್ತರು ಈ ಕೆಳಗಿನ ವಾಟ್ಸಪ್ ಸಂಖ್ಯೆಗೆ ತಮ್ಮ ಬಯೋಡಾಟಾ ಹಾಗೂ ಭಾವಚಿತ್ರ ಕಳುಹಿಸಬಹುದು
M:9423965721

**ಬೇಕಾಗಿದ್ದಾರೆ**
ಲೇಡಿಸ್ ಸ್ಟಾಫ್ ಸೇಲ್ಸ್‌ಗೆ ಬೇಕಾಗಿದ್ದಾರೆ
ಸಮ್ಯಕ್ ಸೆರಾಮಿಕ್ಸ್,
ಹದಡಿ ರಸ್ತೆ, ದಾವಣಗೆರೆ.
ಮೊ : 98450 81234

**ಬೇಕಾಗಿದ್ದಾರೆ**
ರೆಸ್ಟೋರೆಂಟ್ ನಲ್ಲಿ ಚೈನೀಸ್ ಫುಡ್ ಮಾಡುವ ಅನುಭವವಿರುವ ಅಡುಗೆ ಭಟ್ಟರು ಬೇಕಾಗಿದ್ದಾರೆ. ತಿಂಗಳಿಗೆ ರೂ.30,000/- ಹಾಗು ಸಪ್ಲೇಯರ್ಸ್ ಕೂಡ ಬೇಕಾಗಿದ್ದಾರೆ. ಸಂಪರ್ಕಿಸಿ :
97396 22871

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಆಫೀಸ್‌ನಲ್ಲಿ ಕೆಲಸ ಮಾಡಲು ಪಿಯುಸಿ ಅಥವಾ ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ
ಮೆ. ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43H, ಎಸ್‌ಜೆಜೆಎಂ ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

**LAND SALE / J.V**
Land for sale or Joint vencher near by Davanagere city Limit
1 Acre 3.5 cr.
Contact : Buyer Only.
No Agents. Contact No.
80500 14620, 94823 89317

**ಮಾರಾಟಕ್ಕಿದೆ**
ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆ ಮಾರಾಟಕ್ಕೆ ಇದೆ.
81054 25694
79755 95836

**ಬೇಕಾಗಿದ್ದಾರೆ**
ಡಿ ಎಕ್ಸ್ ಎನ್ ಪ್ರೊಡಕ್ಟ್ ಸೇಲ್ಸ್ ಆಫೀಸ್ ನಲ್ಲಿ ಕೆಲಸ ಮಾಡಲು ರಿಸೆಪ್ಷನಿಸ್ಟ್ ಮತ್ತು ಕಂಪ್ಯೂಟರ್ ನಲ್ಲಿ ದಾಖಲಾತಿ ಮಾಡುವವರು ಬೇಕಾಗಿದ್ದಾರೆ.
ಸಂಪರ್ಕಿಸಿ ಪುನರಚೇತನ ಹೆಲ್ತ್ ಕೇರ್
7ನೇ ಕ್ರಾಸ್, 8ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ.
ಮೊ : 99169 33905

**ವಧು-ವರರ ಮಾಹಿತಿ ಕೇಂದ್ರ**
ಇಲ್ಲಿ ಎಲ್ಲಾ ಜಾತಿಯ ವಧು-ವರರ ಮಾಹಿತಿ ತಿಳಿಸುತ್ತೇವೆ. ಮೊದಲು ಬಂದವರಿಗೆ ಶೀಘ್ರದಲ್ಲಿ ಮಾಹಿತಿ ಕೊಡುತ್ತೇವೆ. ಸಂಪರ್ಕಿಸಿ
78923 28599

**3BHK HOUSE FOR RENT**
At Uttam Badavane, 1st main, B ward No - 30, Avaragere Road. Contact :
99015 64535
94498 04535

**ವಿಮಲ ಸದನ ಮಹಿಳೆಯರ ಹಾಸ್ಟೆಲ್**
ಕುವೆಂಪು ನಗರ, MCC ಬಿ ಬ್ಲಾಕ್
ಸೌಲಭ್ಯಗಳು : ಕಾಟ್, ಫ್ಯಾನ್, ರ್‍ಯಾಕ್, ಬಿಸಿ ನೀರು, ಟಿವಿ, ಮನೆ ವಾತಾವರಣ, ಶುದ್ಧ ಕುಡಿಯುವ ನೀರು, ಊಟ-ಉಪಹಾರ
6360961561, 9844285332

**WANTED LADY TEACHERS**
* B.Sc. / B.Ed. - PCM / CBZ - 04 Posts
Note : we preference will be given to right & Experienced. Attractive Salary will be given to experienced candidates.
95356 10817

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ACCOUNTANT REQUIRED**
With Tally & GST Knowledge
VINAYAK INDUSTRIES
Industrial Area, Lokikere Road, Davangere.
94481 50174

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಮೈಗ್ರೇನ್, ಕ್ಯಾನ್ಸರ್, ಸ್ಟ್ರೋಕ್, ಡಿಪ್ರೆಶನ್, ಸ್ಕಿಜೋಫ್ರೇನಿಯಾ, ಮಾಟ, ಮಂತ್ರ, ಭೂತ ಪ್ರೇತಗಳ ಭಯ ಮುಂತಾದ ಅನೇಕ ಸಮಸ್ಯೆಗಳ ಮೂಲ ಹಿಂದಿನ ಜನ್ಮಗಳ ದೋಷಗಳಿಗೆ ರಾಮಬಾಣ ಚಿಕಿತ್ಸೆ
8073342011
(ವ್ಯಕ್ತಿ ಎಷ್ಟೇ ದೂರವಿದ್ದರೂ distance heeling ಮಾಡುತ್ತೇವೆ)

# ಭವಿಷ್ಯದಲ್ಲಿ ಉತ್ತಮ ನಾಯಕತ್ವ ಗುಣ ಬೆಳೆಸಿಕೊಳ್ಳಿ



## ಈಶ್ವರಮ್ಮ ಶಾಲೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪಾಲಿಕೆಯ ಮಾಜಿ ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್ ಕಿವಿಮಾತು

ದಾವಣಗೆರೆ, ಜು.9- ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ನಾಯಕತ್ವದ ಗುಣ ಅಳವಡಿಸಿಕೊಂಡು ಭವಿಷ್ಯದಲ್ಲಿ ಉತ್ತಮ ನಾಯಕರಾಗಬೇಕೆಂದು ಪಾಲಿಕೆಯ ಮಾಜಿ ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್ ಕಿವಿಮಾತು ಹೇಳಿದರು.

ನಗರದ ಈಶ್ವರಮ್ಮ ಶಾಲೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ 2024-25ನೇ ಸಾಲಿನ ಶೈಕ್ಷಣಿಕ ಶಾಲಾ ಮಂತ್ರಿ ಮಂಡಲದ ಪ್ರತಿಜ್ಞಾ ಸ್ವೀಕಾರ ಮತ್ತು ವಿದ್ಯಾರ್ಥಿ ಸಂಘದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಆತ್ಮವಿಶ್ವಾಸ ಬೆಳೆಸಿಕೊಂಡು ಗುರುಗಳ ಮಾರ್ಗದರ್ಶನದಲ್ಲಿ ದೇಶಕ್ಕೆ ಮತ್ತು ಪಾಲಕರಿಗೆ ಕೀರ್ತಿ ತರುವಂತವರಾಗಬೇಕು ಎಂದು ಹೇಳಿದರು. ವಿರೋಧ ಪಕ್ಷವು, ಆಡಳಿತ ಪಕ್ಷದ ಕಾರ್ಯ ವೈಖರಿ ಹಾಗೂ ತಪ್ಪುಗಳನ್ನು ತಿದ್ದುವ ಬಗ್ಗೆ ಮಕ್ಕಳು ತಿಳಿದುಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಶಾಲಾ ಆಡಳಿತ ಮಂಡಳಿ ಅಧ್ಯಕ್ಷರಾದ ಕೆ. ಆರ್. ಸುಜಾತ ಕೃಷ್ಣ ಮಾತನಾಡಿ, ಮಂತ್ರಿ ಮಂಡಲದ ವಿದ್ಯಾರ್ಥಿಗಳು ಉತ್ತಮ ಮೌಲ್ಯ ಅಳವಡಿಸಿಕೊಳ್ಳಬೇಕು. ಮುಂಬರುವ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಬೇಕು ಎಂದು ಕಿವಿಮಾತು ಹೇಳಿದರು.

ಆಡಳಿತ ಪಕ್ಷವನ್ನು ವಿರೋಧಿಸುವುದು ವಿಪಕ್ಷದ ಕೆಲಸವಾಗಿದೆ. ಆದರೆ ಶಾಲಾ ಮಂತ್ರಿ ಮಂಡಲದ ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದವರು ಒಗ್ಗಟ್ಟಿನಿಂದ ಶಾಲೆಯ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ತಂದೆ-ತಾಯಿ, ಗುರು-ಹಿರಿಯರನ್ನು ಗೌರವಿಸುವ ಜತೆಗೆ ಸ್ವಾಮಿ ವಿವೇಕಾನಂದರಂತೆ ದೇಶ ಭಕ್ತರಾಗಬೇಕು ಮತ್ತು ಉತ್ತಮ ನಾಯಕತ್ವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮುಖ್ಯಮಂತ್ರಿ ಸ್ಥಾನಕ್ಕೆ 10ನೇ ತರಗತಿ ವಿದ್ಯಾರ್ಥಿನಿ (ಬಿ.ಎನ್. ಭಾವನಾ), ವಿಪಕ್ಷ ನಾಯಕಿಯಾಗಿ 10ನೇ ತರಗತಿ ವಿದ್ಯಾರ್ಥಿನಿ (ಎ.ಪಿ. ಯಶಸ್ವಿನಿ) ಆಯ್ಕೆಯಾಗಿದ್ದಾರೆ.

25 ಸಚಿವರನ್ನೊಳಗೊಂಡ ಶಾಲಾ ಮಂತ್ರಿ ಮಂಡಲದಲ್ಲಿ ರಾಜ್ಯಪಾಲರಾಗಿ ಪ್ರಾಚಾರ್ಯ ಕೆ. ಎಸ್. ಪ್ರಭುಕುಮಾರ್, ಸಭಾಪತಿಯಾಗಿ ಉಪಪ್ರಾಚಾರ್ಯೆ ಜಿ.ಎಸ್. ಶಶಿರೇಖಾ, ಸಂಪುಟ ಕಾರ್ಯದರ್ಶಿಯಾಗಿ ಸಹ ಶಿಕ್ಷಕಿ ರೋಹಿಣಿ ಎಂ. ಬಾವಿ ಅವರು ನಾಯಕರಾಗುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾದರು.

ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ - ಪ್ರಾಚಾರ್ಯ ಕೆ.ಎಸ್. ಪ್ರಭುಕುಮಾರ್ ಮಂತ್ರಿಮಂಡಲದ ಎಲ್ಲ ಮಂತ್ರಿಗಳಿಗೆ ಪ್ರಮಾಣ ವಚನ ಬೋಧಿಸಿದರು.

ಸಹ ಶಿಕ್ಷಕಿ ಹೇಮಲತಾ ಚುನಾವಣಾ ಪ್ರಕ್ರಿಯೆ ವಿವರಿಸಿದರು. ಬಿ. ಶ್ರೀದೇವಿ ವಿದ್ಯಾರ್ಥಿ ಸಂಘ ಪರಿಚಯಿಸಿದರು.

ಈಶ್ವರಮ್ಮ ಟ್ರಸ್ಟ್ ಕಾರ್ಯದರ್ಶಿ ಜಿ.ಆರ್ ವಿಜಯಾನಂದ್, ಜಿ.ಎಸ್. ಶಶಿರೇಖಾ, ಎನ್. ಎಸ್. ಸವಿತಾ, ಎಂ. ರೋಹಿಣಿ ಇದ್ದರು.

# ಹರಿಹರದಲ್ಲಿ ಇಂದು ಧರ್ಮ ಜಾಗೃತಿ ಸಮಾರಂಭ

ಹಳೇಪೇಟೆ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರದಲ್ಲಿ ಇಂದು ಸಂಜೆ 6 ಗಂಟೆಗೆ ಬಾಳೆಹೊನ್ನೂರು ಶ್ರೀ ಮದ್ರಂಭಾಪುರಿ ಜಗದ್ಗುರುಗಳವರ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮ ಜಾಗೃತಿ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಡಾ. ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಸಾನ್ನಿಧ್ಯ ವಹಿಸಲಿದ್ದಾರೆ. ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕಿ ಲತಾ ಮಲ್ಲಿಕಾರ್ಜುನ್, ಅಖಿಲ ಭಾರತ ವೀರಶೈವ ಮಹಾಸಭಾ ಹರಿಹರ ತಾಲ್ಲೂಕು ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ, ಮಲೇಬೆನ್ನೂರು ರೇಣುಕಾ ರೈಸ್‌ಮಿಲ್‌ನ ಬಿ.ಎಂ. ವಾಗೀಶಸ್ವಾಮಿ, ಹಳೇಬಾತಿ ತಪೋವನದ ಛೇರ್ಮನ್ ಶಶಿಕುಮಾರ್ ಮೆಹರ್ವಾಡೆ, ಹಳೆ ಹರ್ಲಾಪುರ ಕಾಂಗ್ರೆಸ್ ಮುಖಂಡ ಬಿ. ಹಾಲೇಶಗೌಡ, ಹರಿಹರ ವೀರಶೈವ ಸಮಾಜದ ಮುಖಂಡ ಕೊಂಡಜ್ಜಿ ಈಶ್ವರಪ್ಪ ಭಾಗವಹಿಸಲಿದ್ದಾರೆ.

# 13ರಂದು ರಾಷ್ಟ್ರೀಯ ಲೋಕ್ ಅದಾಲತ್

## 8,831 ಪ್ರಕರಣಗಳು ಇತ್ಯರ್ಥಕ್ಕೆ ಅರ್ಹ, 5 ಸಾವಿರ ಇತ್ಯರ್ಥದ ಗುರಿ



ದಾವಣಗೆರೆ, ಜು. 9 - ಇದೇ ದಿನಾಂಕ 13ರ ಶನಿವಾರ ನಗರದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಒಟ್ಟು 40,713 ಪ್ರಕರಣಗಳು ಬಾಕಿ ಇವೆ. ಇವುಗಳ ಪೈಕಿ 8,871 ಪ್ರಕರಣಗಳು ರಾಜಿಗೆ ಅರ್ಹ ಎಂದು ಗುರುತಿಸಲಾಗಿದೆ. ಈ ಬಾರಿ 5-6 ಸಾವಿರ ಪ್ರಕರಣಗಳು ರಾಜೀ ಮಾಡುವ ಗುರಿ ಇದೆ ಎಂದು ಹೇಳಿದರು.

ಈ ಹಿಂದೆ ಮಾರ್ಚ್ 16ರಂದು ಲೋಕ್ ಅದಾಲತ್ ನಡೆದಾಗ 4,568 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಲಾಗಿತ್ತು ಎಂದವರು ಹೇಳಿದರು.

ಈಗಾಗಲೇ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಜೊತೆಗೆ, ವ್ಯಾಜ್ಯ ಪೂರ್ವ ಪ್ರಕರಣಗಳನ್ನೂ ರಾಜೀ ಸಂಧಾನಕ್ಕೆ ಒಳಪಡಿಸಲಾಗುವುದು.

ಲೋಕ್ ಅದಾಲತ್ ಮೂಲಕ ಶೀಘ್ರವಾಗಿ ಹಾಗೂ ಶುಲ್ಕ ರಹಿತವಾಗಿ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಸಾಧ್ಯ. ನ್ಯಾಯಾಲಯದ ತೀರ್ಪಿನಲ್ಲಿ ಒಬ್ಬರು ಮಾತ್ರ ಗೆಲ್ಲಲು ಸಾಧ್ಯ, ರಾಜೀ ಸಂಧಾನದಲ್ಲಿ ಇಬ್ಬರೂ ಕಕ್ಷಿದಾರರಿಗೆ ಗೆಲುವು ಸಿಗುತ್ತದೆ ಎಂದು ನ್ಯಾಯಾಧೀಶೆ ಹೆಗಡೆ ಹೇಳಿದರು.

ಸಾರ್ವಜನಿಕರಿಗೆ ಆಸ್ತಿ ತೆರಿಗೆ ಪಾವತಿಸಲು ಅನುಕೂಲವಾಗಲೆಂದು ಶೇ.5ರ ರಿಯಾಯಿತಿಯನ್ನು ಸರ್ಕಾರದ ಆದೇಶದ ಮೂಲಕ ಜಾರಿಗೆ ತರಲಾಗಿದೆ. ಈ ಅವಕಾಶವನ್ನೂ ಸಾರ್ವಜನಿಕರು ಲೋಕ್ ಅದಾಲತ್ ಮೂಲಕ ಬಳಸಿಕೊಳ್ಳಬಹುದು ಎಂದರು.

ರಾಜೀಯಾಗಬಲ್ಲ ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪರಿಹಾರ ಪ್ರಕರಣಗಳು, ಚೆಕ್ ಅಮಾನ್ಯ ಪ್ರಕರಣಗಳು, ಭೂಸ್ವಾಧೀನ ಪರಿಹಾರ, ಬ್ಯಾಂಕ್ ಸಾಲ, ಎಂ.ಎಂ.ಡಿ.ಆರ್., ವಿಚ್ಛೇದನ ಹೊರತಾದ ಕೌಟುಂಬಿಕ ನ್ಯಾಯಾಲಯದ ಪ್ರಕರಣಗಳು, ಪಿಂಚಣಿ, ವೇತನ, ವಿದ್ಯುತ್, ನೀರಿನ ಶುಲ್ಕ, ಕೈಗಾರಿಕಾ ಕಾರ್ಮಿಕರ ವೇತನ, ಕಾರ್ಮಿಕ ವಿವಾದ ಇತ್ಯಾದಿ ಪ್ರಕರಣಗಳನ್ನು ಪರಸ್ಪರ ಮಾತುಕತೆಯಿಂದ ಬಗೆಹರಿಸಿಕೊಳ್ಳಬಹುದು ಎಂದವರು ಹೇಳಿದರು.

ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಹಳೆ ನ್ಯಾಯಾಲಯದ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ (ದೂ.: 08192 - 296364), ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಹರಿಹರ ದೂ.: 08192 - 296885, ಹೊನ್ನಾಳಿ ದೂ. :08188 251732, ಚನ್ನಗಿರಿ ದೂ. :08189 - 229195 ಹಾಗೂ ಜಗಳೂರು ದೂ. : 08196 227600 ಇವರನ್ನು ಸಂಪರ್ಕಿಸಬಹುದು.

ಜಿಲ್ಲಾ ವಕೀಲರ ಒಕ್ಕೂಟದ ಅಧ್ಯಕ್ಷ ಎಲ್. ಹೆಚ್. ಅರುಣ್ ಕುಮಾರ್ ಮಾತನಾಡಿ, ಜಿಲ್ಲಾ ವಕೀಲರ ಒಕ್ಕೂಟದ ವತಿಯಿಂದ ಲೋಕ್ ಅದಾಲತ್‌ಗಳಿಗೆ ಹಿಂದಿನಿಂದಲೂ ಸಹಕಾರ ನೀಡುತ್ತಾ ಬರಲಾಗಿದೆ. ಕಕ್ಷಿದಾರರಿಗೆ ಲೋಕ್ ಅದಾಲತ್ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ಸಿ.ಜೆ.ಎಂ. ನ್ಯಾಯಾಧೀಶರಾದ ನಿವೇದಿತ, ಎಎಸ್‌ಪಿ ವಿಜಯ ಕುಮಾರ್ ಎಂ. ಸಂತೋಷ್, ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ಬಸವರಾಜ್ ಉಪಸ್ಥಿತರಿದ್ದರು.

## ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವ ಪ್ರಕರಣಗಳಿಗೆ ವಿಶೇಷ ಅದಾಲತ್

ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವ ಬಾಕಿ ಇರುವ ಹಾಗೂ ರಾಜಿಯಾಗಬಲ್ಲ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಶೇಷ ಲೋಕ್ ಅದಾಲತ್ ಅನ್ನು ಜು. 29ರಿಂದ ಆಗಸ್ಟ್ 3ರ ನಡುವೆ ಆಯೋಜಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಹೇಳಿದರು.

ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವ ಈ ಪ್ರಕರಣಗಳನ್ನು ಜಿಲ್ಲಾ ನ್ಯಾಯಾಲಯಗಳು ಸಂಧಾನದ ಮೂಲಕ ಬಗೆಹರಿಸಲು ಪ್ರಯತ್ನಿಸಬೇಕೆಂದು ಸುಪ್ರೀಂ ಕೋರ್ಟ್ ಸೂಚಿಸಿದೆ ಎಂದವರು ಹೇಳಿದರು. ಜಿಲ್ಲೆಯ ಒಟ್ಟು 31 ಇಂತಹ ಪ್ರಕರಣಗಳು ರಾಜೀ ಸಂಧಾನಕ್ಕೆ ಅರ್ಹವಾಗಿವೆ ಎಂದವರು ತಿಳಿಸಿದರು.

ಈ ಪ್ರಕರಣಗಳನ್ನು ಜಿಲ್ಲಾ ಹಂತದಲ್ಲೇ ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಬಹುದು. ಸುಪ್ರೀಂ ಕೋರ್ಟ್‌ನಲ್ಲೇ ಪ್ರಕರಣ ರಾಜೀ ಮಾಡಿಕೊಳ್ಳಲು ಬಯಸುವುದಾದರೆ, ಅದಕ್ಕೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸೌಲಭ್ಯ ಕಲ್ಪಿಸಲಾಗುವುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ತಿಳಿಸಿದರು.

## ಆಲಿ ದೇವರುಗಳನ್ನು ಕಳ್ಳತನ ಮಾಡಿ, ರಸ್ತೆ ಬದಿ ಬಿಟ್ಟು ಹೋದ ಕಳ್ಳರು !

ದಾವಣಗೆರೆ, ಜು.9- ಹಳೇ ಕುಂದುವಾಡದಲ್ಲಿ ಒಂದು ವಾರದ ಹಿಂದೆ ಮಸೀದಿ ಬಾಗಿಲು ಹೊಡೆದ ಖದೀಮರು, ಆಲಿ ದೇವರುಗಳನ್ನು ಕಳ್ಳತನ ಮಾಡಿದ್ದರು. ನಂತರ ಅಲಿ ದೇವರುಗಳನ್ನು ರಸ್ತೆ ಬದಿಯಲ್ಲಿ ಬಿಸಾಡಿ, ಯಾರಿಗೂ ಅನುಮಾನ ಬಾರದಂತೆ ಸುತ್ತಲು ಕಾರದ ಪುಡಿಯನ್ನು ಚೆಲ್ಲಿ ಹೋಗಿದ್ದರು. ನಂತರ ಗ್ರಾಮಸ್ಥರು ದೇವರನ್ನು ಈ ರೀತಿ ಕಳ್ಳತನ ಮಾಡಿ, ನಂತರ ರಸ್ತೆ ಬದಿ ಬಿಸಾಡಿರುವ ಬಗ್ಗೆ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಮುಂದಿನ ವಾರ ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ಇಂದು ಪೊಲೀಸರು ಮಹಜರ್ ನಡೆಸಿ, ದೇವರುಗಳನ್ನು ಸಮಾಜದ ಮುಖಂಡರಿಗೆ ಹಸ್ತಾಂತರಿಸಿದರು.

## ಮಾರ್ಕೆಟಿಂಗ್ ಸೊಸೈಟಿಗೆ ಆಯ್ಕೆ



ರಾಣೇಬೆನ್ನೂರು

ರಾಣೇಬೆನ್ನೂರು, ಜು.9- ರಾಣೇಬೆನ್ನೂರು ಮಾರ್ಕೆಟಿಂಗ್ ಸೊಸೈಟಿಯ ನಿರ್ದೇಶಕರಾಗಿ ನಂದಿಹಳ್ಳಿಯ ಈರನಗೌಡ ಮತ್ತೂರ ಆಯ್ಕೆಯಾಗಿದ್ದು, ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಮಂಜನಗೌಡ ಪಾಟೀಲ, ಕೆಸಿಸಿ ಬ್ಯಾಂಕ್ ನಿರ್ದೇಶಕ ಮಳ್ಳಪ್ಪ ನಿಂಗಜ್ಜನವರ ಹಾಗೂ ಮಾಳನಾಯ್ಕನಹಳ್ಳಿ ಗ್ರಾ.ಪಂ ಅಧ್ಯಕ್ಷ ಯಲ್ಲಪ್ಪರೆಡ್ಡಿ ಅಭಿನಂದಿಸಿದ್ದಾರೆ.

## 13 ರಂದು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರರ ಜನ್ಮ ದಿನಾಚರಣೆ

ದಾವಣಗೆರೆ, ಜು. 9- ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅಭಿಮಾನಿ ಬಳಗದ ವತಿಯಿಂದ ಅವರ ಜನ್ಮ ದಿನಾಚರಣೆ ಸಮಾರಂಭವನ್ನು ಇದೇ ದಿನಾಂಕ 13 ರಂದು ಬೆಳಿಗ್ಗೆ 10.30 ಕ್ಕೆ ನಗರದ ಶ್ರೀ ಅಭಿನವ ರೇಣುಕ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಮುಖಂಡರೂ, ದೂಡಾ ಮಾಜಿ ಅಧ್ಯಕ್ಷರೂ ಆದ ಯಶವಂತರಾವ್ ಜಾಧವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಬಳಗದ ವತಿಯಿಂದ ಎಲ್ಲರೂ ಒಗ್ಗಟ್ಟಿನಿಂದ ಜಿ.ಎಂ. ಸಿದ್ದೇಶ್ವರರ ಜನ್ಮ ದಿನವನ್ನು ಆಚರಿಸಲಾಗುತ್ತಿದೆ. ಅಂಧ ಮಕ್ಕಳು ಕೇಕ್ ಕತ್ತರಿಸುವ ಮೂಲಕ ಶುಭ ಕೋರಲಿದ್ದಾರೆ. ಮಕ್ಕಳಿಗೆ ಭೋಜನದ ವ್ಯವಸ್ಥೆ ಕೂಡ ಮಾಡಲಾಗಿದೆ ಎಂದರು. ಕಾರ್ಯಕ್ರಮಕ್ಕೆ ಬಿಜೆಪಿ ರಾಜ್ಯ ಮುಖಂಡರನ್ನು ಆಹ್ವಾನಿಸಲಾಗುವುದು ಎಂದು ಹೇಳಿದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಮಾತನಾಡಿ, ಜಿ.ಎಂ. ಸಿದ್ದೇಶ್ವರ ಅವರು ಮಧ್ಯ ಕರ್ನಾಟಕದ ಪ್ರಭಾವಿ ನಾಯಕರಾಗಿದ್ದು, ಅವರ ಅಧಿಕಾರವಧಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಬಿ.ಎಸ್. ಜಗದೀಶ್, ಬಿ.ಎಂ. ಸತೀಶ್ ಕೊಳೇನಹಳ್ಳಿ, ಟಿಂಕರ್ ಮಂಜಣ್ಣ, ದೇವರಾಜ್ ನೆಲಹೊನ್ನೆ, ರಾಕೇಶ ಭಜರಂಗಿ, ರಾಜು ನೀಲಗುಂದ ಉಪಸ್ಥಿತರಿದ್ದರು.

## ಇಂದು ನೂತನ ಜಿಲ್ಲಾಧಿಕಾರಿಗೆ ಸ್ವಾಗತ

ನಿಕಟಪೂರ್ವ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅವರಿಗೆ ಬೀಳ್ಕೊಡುಗೆ ಮತ್ತು ನೂತನ ಜಿಲ್ಲಾಧಿಕಾರಿ ಡಾ. ಗಂಗಾಧರಸ್ವಾಮಿ ಜಿ.ಎಂ. ಅವರಿಗೆ ಸ್ವಾಗತ ಕಾರ್ಯಕ್ರಮವನ್ನು ಇಂದು ಸಂಜೆ 4 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿನ ತುಂಗಭದ್ರಾ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

## ‘ಡೆಂಗ್ಯೂ’ ನಿಯಂತ್ರಣಕ್ಕೆ ಅಗತ್ಯ ಕ್ರಮಕ್ಕೆ ಹೆಲ್ಪ್‌ಲೈನ್ ಸುಭಾನ್ ಒತ್ತಾಯ

ದಾವಣಗೆರೆ, ಜು. 9- ಇಡೀ ರಾಜ್ಯಾದ್ಯಂತ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ‘ಡೆಂಗ್ಯೂ’ ನಿಯಂತ್ರಣಕ್ಕೆ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಾಮಾಜಿಕ ಸೇವಾ ಕಾರ್ಯಕರ್ತ ಹೆಲ್ಪ್‌ಲೈನ್ ಸುಭಾನ್ ಒತ್ತಾಯಿಸಿದ್ದಾರೆ.

ಡೆಂಗ್ಯು ಪ್ರಕರಣದಿಂದಾಗಿ ಅನೇಕ ಸಾವು-ನೋವುಗಳು ಸಂಭವಿಸಿದ್ದು, ಈ ಪ್ರಕರಣದಲ್ಲಿ ಮಕ್ಕಳೇ ಹೆಚ್ಚು ಬಲಿಯಾಗುತ್ತಿದ್ದಾರೆ.

ಸರ್ಕಾರ ಈಗಾಗಲೇ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಸ್ವಚ್ಛತಾ ಕಾರ್ಯಕ್ರಮವನ್ನು ಅನುಸರಿಸುತ್ತಾ, ಚರಂಡಿಗಳಲ್ಲಿ ಕೀಟನಾಶಗಳನ್ನು ಸಿಂಪಡಿಸುವ ಕೆಲಸವನ್ನು ಮಾಡುತ್ತಿದೆ. ಆದರೂ ಡೆಂಗ್ಯೂ ಜ್ವರ ತನ್ನ ತಾಂಡವವನ್ನು ನಿಲ್ಲಿಸಿಲ್ಲ. ಮಕ್ಕಳು ಬಲಿಯಾಗುತ್ತಲೇ ಇದ್ದಾರೆ. ಶಾಲೆಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಹಾಗೂ ಸೊಳ್ಳೆ ನಿಯಂತ್ರಣ ಮಾಡುವ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

## ಹತ್ತು ಸಾವಿರ ಎ.ಸಿ. ರಹಿತ ಬೋಗಿ ಉತ್ಪಾದನೆ

ನವದೆಹಲಿ, ಜು. 9 - ಮುಂದಿನ ಎರಡು ವರ್ಷಗಳಲ್ಲಿ ಹತ್ತು ಸಾವಿರ ಎಸಿ ರಹಿತ ಬೋಗಿಗಳನ್ನು ಉತ್ಪಾದಿಸುವುದಾಗಿ ರೈಲ್ವೆ ತಿಳಿಸಿದೆ.

ಸಾಮಾನ್ಯ ಪ್ರಯಾಣಿಕರಿಗೆ ಸೌಲಭ್ಯ ಹೆಚ್ಚಿಸುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗುವುದು. ಮುಂದಿನ ಎರಡು ವರ್ಷಗಳಲ್ಲಿ ಎಸಿ ರಹಿತ ಭೋಗಿಗಳ ಸಂಖ್ಯೆ ಶೇ. 26ರಷ್ಟು ಹೆಚ್ಚಾಗಲಿದೆ ಎಂದು ಉತ್ತರ ರೈಲ್ವೆ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ವೈದ್ಯಕೀಯ ಕಾಲೇಜುಗಳಿಗೆ ದಂಡ

## ಎನ್‌ಎಂಸಿ ಕ್ರಮ ಏಕಪಕ್ಷೀಯ : ಎಐಡಿಎಸ್‌ಓ ಖಂಡನೆ

ದಾವಣಗೆರೆ, ಜು.9- ವೈದ್ಯಕೀಯ ಕಾಲೇಜುಗಳಿಗೆ ದಂಡ ವಿಧಿಸಿರುವ ಎನ್‌ಎಂಸಿ ಕ್ರಮವು ಏಕಪಕ್ಷೀಯ ವಾಗಿದೆ ಎಂದು ಎಐಡಿಎಸ್‌ಓ ಖಂಡಿಸಿದೆ.

ಈ ಸಂಬಂಧ ಹೇಳಿಕೆ ನೀಡಿರುವ ಎಐಡಿಎಸ್‌ಓನ ರಾಜ್ಯ ಕಾರ್ಯದರ್ಶಿ ಅಜಯ ಕಾಮತ್, ರಾಜ್ಯದ ಹಲವು ವೈದ್ಯಕೀಯ ಕಾಲೇಜು ಗಳಿಗೆ ನೋಟಿಸ್ ಜಾರಿ ಮಾಡಿರುವ ಎನ್‌ಎಂಸಿಯು, ಕಾಲೇಜು ನಡೆಸಲು ಅಪೇಕ್ಷಿತ ಗುಣಮಟ್ಟವನ್ನು ಹೊಂದದಿರುವುದಕ್ಕೆ ದಂಡ ವಿಧಿಸಿದೆ.

ರಾಜ್ಯದ 13 ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ 11 ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ದಂಡ ವಿಧಿಸಲಾಗಿದೆ. ದಂಡದ ಮೊತ್ತವು 2 ಲಕ್ಷ ರೂಪಾಯಿಯಿಂದ 15 ಲಕ್ಷದ ವರೆಗೂ ಇದೆ. ವೈದ್ಯಕೀಯ ಕಾಲೇಜುಗಳು ಅಪೇಕ್ಷಿತ ಗುಣಮಟ್ಟವನ್ನು ಕಾಪಾಡಲೇಬೇಕು, ಆದರೆ ಈ ರೀತಿ ದಂಡ ವಿಧಿಸುವುದು ಅತ್ಯಂತ ಅಪ್ರಜಾತಾಂತ್ರಿಕವಾಗಿದೆ ಎಂದಿದ್ದಾರೆ.

ಎನ್‌ಎಂಸಿಯ ಈ ನಡೆಯು ಗುಣಮಟ್ಟದ ಶಿಕ್ಷಣದ ಮೂಲ ಉದ್ದೇಶಕ್ಕೆ ವಿರುದ್ಧವಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸಿಬ್ಬಂದಿಗಳ ಸಂಖ್ಯೆಯು ಕಡಿಮೆ ಇದ್ದು, ಮೂಲ ಸೌಕರ್ಯಗಳು ಅವಶ್ಯಕ ಮಟ್ಟದಲ್ಲಿ ಇರದಿದ್ದರೆ, ಇದರ ಜವಾಬ್ದಾರಿ ಹೊತ್ತು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವ ಮತ್ತು ಸಮರ್ಪಕ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ಆಡಳಿತ ವರ್ಗವೇ ವಹಿಸಿಕೊಳ್ಳಬೇಕು ಮತ್ತು ಈ ನಿಟ್ಟಿನಲ್ಲಿ ಸಮರ್ಪಕ ಅನುದಾನ ಒದಗಿಸಬೇಕು.

ಸರ್ಕಾರಿ ವೈದ್ಯಕೀಯ ಕಾಲೇಜುಗಳ ಅವ್ಯವಸ್ಥೆಯ ಕುರಿತು ಹಲವಾರು ವರದಿಗಳು ವಿವರಿಸಿವೆ. ರಾಜ್ಯ ಸರ್ಕಾರ ಅಥವಾ ಎನ್‌ಎಂಸಿ ಈ ಕುರಿತು ಯಾವುದೇ ಕ್ರಮ ಕೈಗೊಂಡಿಲ್ಲ. ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಣಕಾಸು ಸಹಾಯ ಒದಗಿಸುವುದರ ಬದಲಿಗೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾ ತೆರೆದು ದುಡ್ಡು ಮಾಡಲು ಯತ್ನಿಸುತ್ತಿದೆ ಎಂದು ಅವರು ದೂರಿದ್ದಾರೆ.

## ಡಿ.ಇ.ಎಲ್.ಇಡಿ ದಾಖಲಾತಿಗೆ ಅರ್ಜಿ

ದಾವಣಗೆರೆ, ಜು. 9- ಪ್ರಥಮ ವರ್ಷದ ಡಿ.ಇ.ಎಲ್.ಇಡಿ.ಗೆ ದಾಖಲಾತಿ ಪಡೆಯಲು ಇದೇ ದಿನಾಂಕ 31ರವರೆಗೆ ಆಫ್‌ಲೈನ್ ಅರ್ಜಿ ಸಲ್ಲಿಸಲು ಅವಧಿ ವಿಸ್ತರಿಸಲಾಗಿದೆ. ಕನ್ನಡ - ಉರ್ದು ಮಾಧ್ಯಮದಲ್ಲಿ ಪ್ರವೇಶ ಪಡೆಯಬಹುದು.

ಅರ್ಜಿ ನಮೂನೆಗಳನ್ನು ಡೌನ್ ಲೋಡ್ ಮಾಡಿಕೊಂಡು ನಿಗದಿತ ದಾಖಲೆಗಳು ಮತ್ತು ಡಿ.ಡಿ.ಯೊಂದಿಗೆ ನೋಡಲ್ ಕೇಂದ್ರವಾದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, (ಡಯಟ್), ದಾವಣಗೆರೆ ಇಲ್ಲಿ ಸಲ್ಲಿಸಬಹುದಾಗಿರುತ್ತದೆ.

ವಿವರಕ್ಕೆ ಸಂಪರ್ಕಿಸಿ : ದೂ.ಸಂ: ಕನ್ನಡ ಮಾಧ್ಯಮ - 9164489972, 988030377. 9844401092. 08192-231156, ಉರ್ದು ಮಾಧ್ಯಮ- 9164489972, 8867932439, 08192-231156.

WANTED
Male Helper for Factory work
• Qualification : ITI or SSLC
Contact
SCHAMEG MODULAR INDUSTIRES
Behind Sai International Hotel, P.B.Road Davangere.
Contact : 96635 19717

COMMERCIAL SPACE AVAILABLE FOR RENT
in the Heart of the City PB Road Near Gandi Circle
1st Floor (4038 sft)
2nd Floor (5662 sft)
Contact here
DRHD ASSOCIATION
P.B. Road Near Gandi Circle, Davangere.
Phone: (08192) – 258834, 94498 28834

# ಭದ್ರಾ ಡ್ಯಾಂ ಗೇಟ್ ರಿಪೇರಿ ತಾತ್ಕಾಲಿಕ ಮಾತ್ರ, ಡ್ಯಾಂ ನೀರು ಯಾವುದೇ ಸಮಯದಲ್ಲಾದರೂ ಖಾಲಿಯಾಗಬಹುದು !!!

ಓದುಗರ ಪತ್ರ

ಮಾನ್ಯರೇ,

ನಿನ್ನೆ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮುಖಂಡರಾದ ಮಾಡಾಳ್ ಮಲ್ಲಿಕಾರ್ಜುನ, ಲೋಕಿಕೆರೆ ನಾಗರಾಜ್, ಧನಂಜಯ ಕಡ್ಲೇಬಾಳ್, ಚಂದ್ರಶೇಖರ ಪೂಜಾರ್ ಮುಂತಾದವರು ಭದ್ರಾ ಡ್ಯಾಂಗೆ ಖುದ್ದು ಭೇಟಿ ನೀಡಿದ್ದರು. ಡ್ಯಾಂನ ಸ್ಲೂಯಿಸ್ ಗೇಟ್‌ನಿಂದ ನೀರು ಪೋಲಾಗುತ್ತಿರುವುದನ್ನು ಖುದ್ದು ವೀಕ್ಷಣೆ ಮಾಡಿದ್ದಾರೆ. ನೀರು ಹೊಳೆಗೆ ಹರಿಯುತ್ತಿರುವುದು ಸಂಪೂರ್ಣ ನಿಂತಿಲ್ಲ. ಅಲ್ಲಿನ ಭದ್ರಾ ಎಕ್ಸಿಕ್ಯೂಟಿವ್ ಇಂಜಿನಿಯರ್ ರವಿಕುಮಾರ್ ಅವರೊಂದಿಗೆ ಚರ್ಚಿಸಿ ಮಾತನಾಡಿದ್ದಾರೆ.

ಇಂಜಿನಿಯರ್ ರವಿಕುಮಾರ್ ಹೇಳುವ ಪ್ರಕಾರ, ಕಳೆದ ಏಪ್ರಿಲ್ ತಿಂಗಳಿ ನಲ್ಲಿಯೇ ಗೇಟ್ ಕೆಟ್ಟಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿ, ರಿಪೇರಿ ಮಾಡಿಸಲು 20 ಲಕ್ಷ ರೂ. ಅನುದಾನ ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ಲೋಕಸಭಾ ಚುನಾವಣೆ ನಿಮಿತ್ತ ನೀತಿ ಸಂಹಿತೆ ಇದೆ ಎಂಬ ನೆಪವೊಡ್ಡಿ ಹಣ ಬಿಡುಗಡೆ ಮಾಡಿಲ್ಲ.

ಕಾಂಗ್ರೆಸ್ ಸರ್ಕಾರದ ದಿವ್ಯ ನಿರ್ಲಕ್ಷ್ಯ ದಿಂದಾಗಿ ಇಷ್ಟು ದಿನ ಕಾಲಹರಣ ಮಾಡಲಾಗಿದೆ. ಅಲ್ಲಿಂದ ಇಲ್ಲಿಯವರೆಗೆ ನೀರು ಹೊಳೆಗೆ ಹರಿದು ಪೋಲಾಗಿದೆ. ಚುನಾವಣೆ ಮುಗಿದ ನಂತರವೂ ವಸ್ತುಸ್ಥಿತಿಯ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲದಿರುವುದು ದುರ್ದೈವದ ಸಂಗತಿ.

ಜಲಸಂಪನ್ಮೂಲ ಖಾತೆ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ದಾವಣಗೆರೆ ಜಿಲ್ಲೆಯ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ ಮತ್ತು ಭದ್ರಾ ನೀರಾವರಿ ಸಲಹಾ ಸಮಿತಿ (ಐ.ಸಿ.ಸಿ) ಅಧ್ಯಕ್ಷರಾಗಿರುವ ಶಿವಮೊಗ್ಗ ಜಿಲ್ಲೆಯ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರಗಳು ಇಂತಹ ಪ್ರಮಾದಕ್ಕೆ ನೇರ ಹೊಣೆಗಾರರಾಗುತ್ತಾರೆ.

ಎಸ್.ಎಸ್.ಮಲ್ಲಿಕಾರ್ಜುನ್ ಅವರು ಪತ್ನಿ ಚುನಾವಣೆಯಲ್ಲಿ ಮತ್ತು ಮಧು ಬಂಗಾರಪ್ಪ ಅವರು ಅಕ್ಕನ ಚುನಾವಣೆಯಲ್ಲಿ ಬ್ಯೂಸಿ. ಹೀಗಾಗಿ ಕಳೆದ ಹಂಗಾಮಿನಲ್ಲಿ ಭೀಕರ ಬರದಿಂದ ತತ್ತರಿಸಿರುವ ರೈತರ ಗೋಳು ಕೇಳುವವರಿಲ್ಲ.

ನಿನ್ನೆ ಡ್ಯಾಂಗೆ ಭೇಟಿ ನೀಡಿದ್ದ ಮುಖಂಡರು ಹೇಳುವ ಪ್ರಕಾರ, ಗೇಟ್ ರಿಪೇರಿ ಮಾಡಿರುವುದು ತಾತ್ಕಾಲಿಕ ವ್ಯವಸ್ಥೆ ಮಾತ್ರ. ಯಾವ ಸಮಯದಲ್ಲಾದರೂ ಗೇಟ್‌ನಿಂದ ನೀರು ಹರಿದು ಹೋಗಿ ಡ್ಯಾಂ ಖಾಲಿಯಾಗಬಹುದು. ಎಲ್ಲಾ ಕಡೆ ಮಳೆ ಚೆನ್ನಾಗಿ ಆಗುತ್ತಿದೆ. ಮಳೆ ಅಬ್ಬರಿಸುತ್ತಿದೆ. ಬತ್ತಿ ಬರಿದಾಗಿದ್ದ ಜಲಪಾತಗಳು ತುಂಬಿ ಭೋರ್ಗರೆಯುತ್ತಿವೆ ಎಂಬ ಸಂತಸ ತರುವ ಸುದ್ದಿಗಳನ್ನು ಟಿವಿ, ಯೂಟ್ಯೂಬ್‌ಗಳಲ್ಲಿ ನೋಡಿ ನೋಡಿ ರೈತರು ಸಾಕಾಗಿ ಹೋಗಿದ್ದಾರೆ. ಆದರೆ, ನಮ್ಮ ಭದ್ರಾ ಡ್ಯಾಂಗೆ ನೀರು ಹರ್ಷ ತರುವ ರೀತಿಯಲ್ಲಿ ಬರುತ್ತಿಲ್ಲ. ಶೃಂಗೇರಿ, ಒಳನಾಡು, ಕುದುರೆಮುಖ ಪ್ರದೇಶದಲ್ಲಿ ಮಳೆ ಚೆನ್ನಾಗಿ ಆಗುತ್ತಿದೆ ಎಂದು ಟಿವಿಗಳಲ್ಲಿ ನೋಡಿದ್ದೇವೆ. ಆದರೆ, ಡ್ಯಾಂಗೆ ಒಳಹರಿವಿನ ಪ್ರಮಾಣ ಹೇಳಿಕೊಳ್ಳುವಂತಹ ರೀತಿಯಲ್ಲಿ ಇಲ್ಲ. ಹಿಂದೆಲ್ಲಾ ಶೃಂಗೇರಿ, ಒಳನಾಡು, ಕುದುರೆಮುಖ ಪ್ರದೇಶದಲ್ಲಿ ಚೆನ್ನಾಗಿ ಮಳೆಯಾದರೆ ಭದ್ರಾ ಡ್ಯಾಂಗೆ ಪ್ರತಿ ದಿನ 50 - 60 ಸಾವಿರ ಕ್ಯೂಸೆಕ್ ನೀರು ಬರುತ್ತಿತ್ತು. ಈಗ ನೋಡಿದ್ರೆ ನಿತ್ಯ 7-8 ಸಾವಿರ ಕ್ಯೂಸೆಕ್ ನೀರು ಬರುತ್ತಿದೆ. ಇದರಲ್ಲಿ ಏನೋ ಇದೆ ಎಂಬ ಸಂಶಯ ರೈತರಲ್ಲಿ ಬರುತ್ತಿದೆ.

- ಬಿ.ಎಂ.ಸತೀಶ್ ಕೊಳೇನಹಳ್ಳಿ, ದಾವಣಗೆರೆ.

## ನಗರದಲ್ಲಿ ಇಂದು ಪಠ್ಯಪೂರಕ ಚಟುವಟಿಕೆಗಳ ಸಮಾರೋಪ

ಕಾಲೇಜು ಶಿಕ್ಷಣ ಮಂಡಳಿ ಮತ್ತು ನ್ಯಾಕ್ 'ಬಿ++' ಶ್ರೇಣಿ ರೂಸಾ ಅನುದಾನಿತ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11ಕ್ಕೆ 2023-24ನೇ ಸಾಲಿನ ಪಠ್ಯಪೂರಕ ಚಟುವಟಿಕೆಗಳ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಭಾಗವಹಿಸಲಿದ್ದಾರೆ. ಅತಿಥಿಗಳಾಗಿ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ, ವಿಶ್ರಾಂತ ಪ್ರಾಧ್ಯಾಪಕ ಡಾ. ಆರ್. ತಿಪ್ಪಾರೆಡ್ಡಿ ಪಾಲ್ಗೊಳ್ಳಲಿದ್ದು, ಕಾಲೇಜಿನ ಪ್ರಾಂಶುಪಾಲ ಡಾ. ಎಂ. ಮಂಜಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಪಾಲಿಕೆ ಸದಸ್ಯೆ ವೀಣಾ ನಂಜಪ್ಪ, ಕಾಲೇಜಿನ ಅಧೀಕ್ಷಕ ಟಿ. ಶೇಷಪ್ಪ ಉಪಸ್ಥಿತರಿರುವರು.

## ಮದ್ಯ ಸೇವಿಸಿ ವಾಹನ ಚಾಲನೆ : 23 ಶಾಲಾ ವಾಹನಗಳ ಚಾಲಕರ ವಿರುದ್ಧ ಕ್ರಮ

ಬೆಂಗಳೂರು, ಜು. 9 - ಮದ್ಯ ಸೇವಿಸಿ ವಾಹನ ಚಲಾಯಿಸುತ್ತಿದ್ದ ಆರೋಪದ ಮೇಲೆ 23 ಶಾಲಾ ವಾಹನಗಳ ಚಾಲಕರ ವಿರುದ್ಧ ಬೆಂಗಳೂರು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಬೆಳಗ್ಗೆ 7ರಿಂದ 9 ಗಂಟೆಯವರೆಗೆ ವಿಶೇಷ ಅಭಿಯಾನ ನಡೆಸಿ, 3,016 ಶಾಲಾ ವಾಹನಗಳ ತಪಾಸಣೆ ನಡೆಸಲಾಯಿತು. ಈ ವೇಳೆ 23 ವಾಹನ ಚಾಲಕರು ಮದ್ಯ ಸೇವಿಸಿದ್ದು ಕಂಡುಬಂದಿದೆ ಎಂದು ಪೊಲೀಸರು ಹೇಳಿದ್ದಾರೆ. ಇವರ ವಿರುದ್ಧ ಮೋಟಾರು ವಾಹನಗಳ ಕಾಯ್ದೆಯ ಅನ್ವಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀಮತಿ ವೀಣಾ. ಪಿ. ಬಿನ್ ಲೇಟ್ ಪರಶುರಾಮಪ್ಪ, ವಯಸ್ಸು 36 ವರ್ಷ, ಮನೆಗೆಲಸ, ವಾಸ: 01134, ರಾಜೀವ್ ಗಾಂಧಿ ಬಡಾವಣೆ, ದಾವಣಗೆರೆ ಇವರು ನೀಡಿದ ಮಾಹಿತಿ ಮತ್ತು ದಾಖಲೆಗಳ ಆಧಾರದ ಮೇಲೆ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ,

ನನ್ನ ಕಕ್ಷಿದಾರರು ದಿನಾಂಕ : 02.04.2024 ರಂದು ನೀಡಿದ ಸಾರ್ವಜನಿಕ ಪ್ರಕಟಣೆಯಂತೆ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಬೂದಿಹಾಳು ಗ್ರಾಮದ ರಿ.ಸ.ನಂ.41/1, ಇದರ ವಿಸ್ತೀರ್ಣ 04 ಎಕರೆ. 04 ಗುಂಟೆವುಳ್ಳ ಜಮೀನು ನನ್ನ ಅಜ್ಜಿಯಾದ ಶ್ರೀಮತಿ ರಂಗಮ್ಮ ಕೋಂ ಬಸಪ್ಪ ಇವರ ಹೆಸರಿಗೆ ಇದ್ದು, ವಾಸೋಪಯೋಗಕ್ಕಾಗಿ ದಾವಣಗೆರೆ ಜಿಲ್ಲಾಧಿಕಾರಿಗಳಿಂದ ದಿನಾಂಕ:16.08.2023 ರಂದು ನಂ.513500ರ ಅಧಿಕೃತ ಜ್ಞಾಪನಾ ಪತ್ರದ ಆದೇಶದ ಪ್ರಕಾರ ಲೇಔಟ್ ಆಗಿ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ನನ್ನ ಕಕ್ಷಿದಾರರು ವಾರಸುದಾರರಾಗಿದ್ದರಿಂದ ನನ್ನ ಕಕ್ಷಿದಾರರ ತಾಯಿಯಾದ ಶ್ರೀಮತಿ ಪ್ರೇಮ ಕೋಂ ಲೇಟ್ ಪರಶುರಾಮಪ್ಪ ಇವರ ಹೆಸರಿಗೆ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನೋಂದಾಯಿತ ಜಿ.ಪಿ.ಎ ಯನ್ನು ದಿನಾಂಕ : 28.02.2024 ರಂದು ಎಸ್. ಆರ್ ನಂ.4357/24 ರಲ್ಲಿ ಬರೆದುಕೊಟ್ಟಿರುತ್ತಾರೆ. ಸದರಿ ಆಸ್ತಿಯಲ್ಲಿ ನನ್ನ ಕಕ್ಷಿದಾರರಿಗೆ ಬರಬೇಕಾದ ಹಿಸ್ಸೆಯ ಪಾಲು ಬಂದಿದ್ದು, ಇನ್ನು ಮುಂದೆ ಸದರಿ ಆಸ್ತಿಗೂ, ನನ್ನ ಕಕ್ಷಿದಾರರಿಗೂ ಯಾವುದೇ ತಂಟೆ ತಕರಾರು ಹಾಗೂ ಸಂಬಂಧ ಇರುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕ ಪ್ರಕಟಣೆಯನ್ನು ಪ್ರಕಟಿಸುವ ಮೂಲಕ ಈ ಹಿಂದೆ ಕಿ5: 02.04.2024 ಹಿಂಪಡೆಯುತ್ತಿದ್ದೇನೆ. ರಂದು ನೀಡಿದ ಸಾರ್ವಜನಿಕ ಪ್ರಕಟಣೆ.

ಕಕ್ಷಿದಾರರ ಸಹಿ
(ಶ್ರೀಮತಿ ವೀಣಾ. ಪಿ.)
ದಿನಾಂಕ:
ಸ್ಥಳ: ದಾವಣಗೆರೆ

ರುದ್ರಮುನಿ ಬಿ. ವಕೀಲರು,
ದಾವಣಗೆರೆ
ಮೊ : 98440 11273

# ರಷ್ಯಾ ಸೈನ್ಯದಲ್ಲಿರುವ ಭಾರತೀಯರ ಬಿಡುಗಡೆಗೆ ಸಮ್ಮತಿ



ಮಾಸ್ಕೋ, ಜು. 9 - ರಷ್ಯಾ ಸೈನ್ಯದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಭಾರತೀಯರನ್ನು ಬಿಡುಗಡೆ ಮಾಡಬೇಕೆಂಬ ಬೇಡಿಕೆಗೆ ರಷ್ಯಾ ಸಮ್ಮತಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಭೇಟಿ ಮಾಡಿದಾಗ ಈ ವಿಷಯವನ್ನು ಪ್ರಸ್ತಾಪಿಸಿದ್ದರು. ಆದಷ್ಟು ಬೇಗ ಎಲ್ಲಾ ಭಾರತೀಯರನ್ನು ರಷ್ಯಾ ಸೈನ್ಯದ ಸೇವೆಯಿಂದ ಬಿಡುಗಡೆ ಮಾಡುವುದಾಗಿ ರಷ್ಯಾ ಕಡೆಯಿಂದ ತಿಳಿಸಲಾಗಿದೆ ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾಟ್ರ ತಿಳಿಸಿದ್ದಾರೆ.

ಭಾರತೀಯರ ದಾರಿ ತಪ್ಪಿಸಿ ಅವರನ್ನು ರಷ್ಯಾ ಸೈನ್ಯದ ಸೇವೆಗೆ ಸೇರಿಸಲಾಗಿದೆ ಎಂದು ಮೋದಿ ಅವರು ರಷ್ಯಾಗೆ ತಿಳಿಸಿದ್ದರು. ನಂತರ ಎಲ್ಲಾ ಭಾರತೀಯರನ್ನು ಬಿಡುಗಡೆ ಮಾಡುವುದಾಗಿ ರಷ್ಯಾ ಹೇಳಿದೆ ಎಂದು ಕ್ವಾಟ್ರ ಹೇಳಿದ್ದಾರೆ.

ಸೋಮವಾರ ರಷ್ಯಾ ತಲುಪಿದ್ದ ಮೋದಿ, ಪುತಿನ್ ಜೊತೆ ಅನೌಪಚಾರಿಕವಾಗಿ ಮಾತನಾಡುತ್ತಾ ಈ ವಿಷಯ ಪ್ರಸ್ತಾಪಿಸಿದ್ದರು ಎಂದು ಮೂಲಗಳು ತಿಳಿಸಿವೆ. ರಷ್ಯಾದಲ್ಲಿ ಭಾರತದ ಸುಮಾರು 35 ರಿಂದ 50 ಜನ ಇದ್ದಾರೆ ಎಂದು ಅಂದಾಜಿಸಲಾಗಿದೆ. ಈ ಪೈಕಿ 10 ಜನ ಈಗಾಗಲೇ ವಾಪಸ್ಸಾಗಿದ್ದಾರೆ.

## ನೇಹಾ ಹತ್ಯೆ ಪ್ರಕರಣದ ಆರೋಪ ಪಟ್ಟಿ ದಾಖಲು

ಹುಬ್ಬಳ್ಳಿ, ಜು 9 - ಹುಬ್ಬಳ್ಳಿಯ ನೇಹಾ ಹಿರೇಮಠ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಆರೋಪ ಪಟ್ಟಿ ದಾಖಲಿಸಿದೆ. 483 ಪುಟಗಳ ಆರೋಪ ಪಟ್ಟಿಯನ್ನು ದಾಖಲಿಸಲಾಗಿದೆ. ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆ ಸದಸ್ಯ ನಿರಂಜನ್ ಹಿರೇಮಠ್ ಪುತ್ರಿಯಾಗಿದ್ದ ನೇಹ ಅವರನ್ನು ಕಾಲೇಜಿನ ಮಾಜಿ ಸಹಪಾಠಿ ಫಯಾಜ್ ಎಂಬಾತ ಹತ್ಯೆ ಮಾಡಿದ್ದ.

# ಮಕ್ಕಳಲ್ಲಿ ಕ್ಷೀಣವಾಗುತ್ತಿರುವ ಮಾನವೀಯ ಮೌಲ್ಯಗಳು

## ವನಿತಾ ಸಮಾಜದ ಅಂಗ ಸಂಸ್ಥೆಗಳಿಂದ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಅವರಿಗೆ ಆತ್ಮೀಯ ಗೌರವ



ದಾವಣಗೆರೆ, ಜು. 9- ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಿದ್ದು, ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ ಕಲಿಸುವ ಅಗತ್ಯವಿದೆ ಎಂದು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಎಂಸಿಸಿ 'ಎ' ಬ್ಲಾಕ್‌ನ ವನಿತಾ ಸಮಾಜದ 'ವಿಮೋಚನಾ' ಸಂಸ್ಥೆಯ ಸಭಾಂಗಣದಲ್ಲಿ ವನಿತಾ ಸಮಾಜ, ಸೇವಾ-ವನಿತಾ ವೈದ್ಯೆಯರ ವೇದಿಕೆ, ವಿಹಾ ವನಿತ ಪರಿಸರ ವೇದಿಕೆ ಸಹಯೋಗದಲ್ಲಿ ವೈದ್ಯ ದಿನಾಚರಣೆ, ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನಹರಿಸುವ ಜೊತೆಗೆ ಅವರೊಟ್ಟಿಗೆ ಒಂದಿಷ್ಟು ಸಮಯ ಕಳೆಯುವುದನ್ನು ರೂಢಿಸಿಕೊಂಡಾಗ ಮಧುರವಾದ ಬಾಂಧವ್ಯ ಏರ್ಪಡುತ್ತದೆ ಎಂದ ಅವರು, ಮಹಿಳೆಯರೂ ಸಹ ತಮ್ಮ ಹಾಗೂ ಮಕ್ಕಳ ಆರೋಗ್ಯದ ಕಡೆ ನಿಗಾ ವಹಿಸಬೇಕೆಂದು ಕರೆ ನೀಡಿದರು.

ಶಿಕ್ಷಣ ಮತ್ತು ಆರೋಗ್ಯ ಪ್ರತಿಯೊಬ್ಬರ ಜೀವನದಲ್ಲಿ ಮಹತ್ತರ ಪಾತ್ರ ವಹಿಸಲಿದ್ದು, ಸದೃಢ ಆರೋಗ್ಯಕ್ಕಾಗಿ ಉತ್ತಮ ಜೀವನ ಶೈಲಿ ಅಳವಡಿಸಿಕೊಳ್ಳಬೇಕು. ತರಕಾರಿ, ಹಣ್ಣು ಸೇರಿದಂತೆ ಪೌಷ್ಠಿಕ ಆಹಾರ ಸೇವನೆ ಮಾಡಬೇಕೆಂದು ಸಲಹೆ ನೀಡಿದರು.

ಒಬ್ಬ ಮಹಿಳೆ ವಿದ್ಯಾವಂತಳಾದರೆ, ಇಡೀ ಕುಟುಂಬವೇ ವಿದ್ಯಾವಂತ ಕುಟುಂಬವಾದಂತೆ. ವಿದ್ಯಾವಂತ ಮಹಿಳೆ ಆ ಕುಟುಂಬದಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಮಕ್ಕಳಿಗೆ ಉತ್ತಮ ಸಂಸ್ಕಾರ, ಸಂಸ್ಕೃತಿ ಕಲಿಸುತ್ತಾಳೆ. ಸಮಾಜ ಬದಲಾವಣೆಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾದುದು ಎಂದು ಹಿತ ನುಡಿದರು.

ಜನರಿಗೆ ಅಗತ್ಯಗಳಿಗೆ ಅನುಗುಣವಾಗಿ ಕಾರ್ಯಕ್ರಮ ಗಳನ್ನು ನೀಡಿದಾಗ ಮಾತ್ರ ಅಂತಹ ಸೇವೆ ಸಾರ್ಥಕವಾಗುತ್ತದೆ. ಮಾಜಿ ಸಚಿವರೂ, ವನಿತಾ ಸಮಾಜದ ಸಂಸ್ಥಾಪಕರೂ ಆಗಿದ್ದ ದಿ. ನಾಗಮ್ಮ ಕೇಶವಮೂರ್ತಿ ಅವರು ಮಹಿಳೆಯರಿಗೆ ಶಕ್ತಿಯಾ ಗಿದ್ದರು. ವನಿತಾ ಸಮಾಜ ಮತ್ತು ಅದರ ಅಂಗ ಸಂಸ್ಥೆಗಳನ್ನು ಕಟ್ಟಿ ಸಾವಿರಾರು ಮಹಿಳೆಯರ ಬದುಕಿಗೆ ನೆರವಾಗಿದ್ದರು. ಅವರ ಸಮಾಜ ಸೇವಾ ಕಾರ್ಯಗಳು ಅವಿಸ್ಮರಣೀಯ ಎಂದರು.

ವನಿತಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಪದ್ಮಾ ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಐಎಂಎ ಕಾರ್ಯದರ್ಶಿ, ಫಿಜಿಷಿಯನ್ ಡಾ. ಇ.ಎಂ. ಸುರೇಂದ್ರ, ವನಿತಾ ಪರಿಸರ ವೇದಿಕೆ ಅಧ್ಯಕ್ಷೆ ಡಾ. ಶಾಂತಾ ಭಟ್ ಉಪಸ್ಥಿತರಿದ್ದರು.

ಇದೇ ವೇಳೆ ವನಿತಾ ಸಮಾಜ, ಸೇವಾ-ವನಿತಾ ವೈದ್ಯೆಯರ ವೇದಿಕೆ, ವಿಹಾ ವನಿತಾ ಪರಿಸರ ವೇದಿಕೆ ವತಿಯಿಂದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೌರವಿಸಲಾಯಿತು.

ಪ್ರಭಾ ರವೀಂದ್ರ, ರಮಾ ನಾಗರಾಜು ಪ್ರಾರ್ಥಿಸಿದರು. ಡಾ. ಶಾಂತ ಭಟ್ ಸ್ವಾಗತಸಿದರು. ಲತಿಕಾ ದಿನೇಶ್ ಕೆ. ಶೆಟ್ಟಿ ಅತಿಥಿಗಳನ್ನು ಪರಿಚಯಿಸಿದರು. ಸರಳಾ ಶಾಂತಿನಾಥ್ ನಿರೂಪಿಸಿದರು. ಡಾ. ಚೈತಾಲಿ, ಗೀತಾ ಬದರಿನಾಥ್ ವರದಿ ವಾಚಿಸಿದರು. ಪದ್ಮಾಪ್ರಕಾಶ್ ವಂದಿಸಿದರು.



**'ಗೋರ್ಮಾಟಿ'** ದಾವಣಗೆರೆಯ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಮಂಗಳವಾರ ಸಂಜೆ ಬಂಜಾರ ಜನಾಂಗದ ಕಲೆ, ಸಂಸ್ಕೃತಿ, ಬದುಕು ಹಾಗೂ ಬವಣೆಗಳ ಸಂಕಥನ 'ಗೋರ್ಮಾಟಿ' ನಾಟಕ ಪ್ರದರ್ಶನಗೊಂಡಿತು. ಮೈಸೂರಿನ ರಂಗಾಯಣ ಹಾಗೂ ಬಂಜಾರ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಈ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

## ಸಣ್ಣ ಉದ್ಯಮಗಳ 45 ದಿನಗಳ ಪಾವತಿ ನಿಯಮ ಸಡಿಲಿಕೆ

ನವದೆಹಲಿ, ಜು, 9 - ಮಧ್ಯಮ ಹಾಗೂ ಸಣ್ಣ ಉದ್ಯಮ ಗಳಿಂದ ಸರಕು ಮತ್ತು ಸೇವೆಗಳನ್ನು ಖರೀದಿಸಿದ 45 ದಿನಗಳ ಒಳಗೆ ಪಾವತಿ ಮಾಡಬೇಕು ಎಂಬ ನಿಯಮ ಸಡಿಲಿಸಲು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸರ್ಕಾರದ ನಿಯಮಗಳ ಕಾರಣದಿಂದಾಗಿ ದೊಡ್ಡ ಉದ್ಯಮಗಳು ಸಣ್ಣ ಉದ್ಯಮಗಳಿಂದ ಸರಕು ಮತ್ತು ಸೇವೆಗಳನ್ನು ಖರೀದಿಸುವುದನ್ನು ನಿಲ್ಲಿಸುತ್ತಿವೆ ಎಂಬ ಆಕ್ಷೇಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಈ ಕ್ರಮಕ್ಕೆ ಮುಂದಾಗಲಾಗಿದೆ.

ಜುಲೈ 23ರಂದು ಕೇಂದ್ರ ಬಜೆಟ್ ಮಂಡಿಸುತ್ತಿದ್ದು, ಆ ವೇಳೆ ಹೊಸ ನಿಯಮ ಜಾರಿಗೆ ಬರುವ ಸಾಧ್ಯತೆ ಇದೆ. ಆದಾಯ ತೆರಿಗೆಯ 43 ಬಿ (ಹೆಚ್) ಸೆಕ್ಷನ್ ಅನ್ವಯ ಖರೀದಿಯ 45 ದಿನಗಳಲ್ಲಿ ಪಾವತಿ ಮಾಡಬೇಕಿದೆ. ಸಣ್ಣ ಉದ್ಯಮಗಳಿಗೆ ಪಾವತಿ ವಿಳಂಬವಾಗುವುದನ್ನು ತಪ್ಪಿಸಲು ಕಳೆದ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಆದಾಯ ತೆರಿಗೆ ಕಾಯ್ದೆಗೆ ತಿದ್ದುಪಡಿ ತಂದಿತ್ತು. 45 ದಿನಗಳಲ್ಲಿ ಪಾವತಿಸದೇ ಇದ್ದರೆ ದೊಡ್ಡ ಉದ್ಯಮಗಳು ಹೆಚ್ಚಿನ ತೆರಿಗೆ ಪಾವತಿಸಬೇಕಾಗುತ್ತದೆ.

ಆದರೆ ಈ ನಿಯಮಗಳ ಕಾರಣದಿಂದ ದೊಡ್ಡ ಖರೀದಿದಾರರು ಎಂಎಸ್‌ಎಂಇಗಳಿಂದ ದೂರವಾಗಬಹುದು. ಅವರು ಬೇರೆ ಕಡೆಯಿಂದ ಸರಕುಗಳನ್ನು ಖರೀದಿಸಬಹುದು ಎಂದು ಉದ್ಯಮ ವಲಯದಲ್ಲಿ ಕಳವಳ ವ್ಯಕ್ತವಾಗಿತ್ತು.

# ಹತ್ರಾಸ್ ಕಾಲ್ತುಳಿತ ಪ್ರಕರಣ ಆರು ಜನರ ಅಮಾನತ್ತು

ಲಖ್ನೌ, ಜು. 9 - ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ಕಲ್ತುಳಿತದಿಂದ ಸಾವುಗಳು ಸಂಭವಿಸಿದ ಪ್ರಕರಣಕ್ಕೆಸಂಬಂಧಿಸಿದಂತೆ ನಿರ್ಲಕ್ಷ ತೋರಿದ ಆರೋಪದ ಮೇಲೆ ಆರು ಜನರನ್ನು ಅಮಾನತ್ತುಗೊಳಿಸ ಲಾಗಿದೆ. ವಿಶೇಷ ತನಿಖಾ ತಂಡ (ಎಸ್.ಐ.ಟಿ.)ದ ವರದಿ ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಜುಲೈ 2ರಂದು ನಡೆದ ಕಾಲ್ತುಳಿತ ದಲ್ಲಿ 121 ಜನ ಸಾವನ್ನಪ್ಪಿದ್ದರು. ಈ ಘಟನೆಯ ಹಿಂದೆ ದೊಡ್ಡ ಸಂಚಿರುವ ಸಾಧ್ಯತೆಯನ್ನು ತಳ್ಳಿ ಹಾಕಲಾಗದು ಎಂದು ವರದಿಯಲ್ಲಿ ತಿಳಿಸಲಾಗಿದೆ. ಜೊತೆಗೆ ಸ್ಥಳೀಯ ಆಡಳಿತವು ಲೋಪ ಎಸಗಿದೆ ಎಂದು ತಿಳಿಸಲಾಗಿದೆ. ಕಾರ್ಯ ಕ್ರಮದ ಆಯೋಜಕರು ಘಟನೆಗೆ ಹೊಣೆ ಯಾಗಿದ್ದಾರೆ. ಅವರು ಗುಂಪು ನಿಯಂತ್ರಿ ಸಲು ಅಗತ್ಯ ವ್ಯವಸ್ಥೆ ಮಾಡಿರಲಿಲ್ಲ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

ಸ್ಥಳೀಯ ಪೊಲೀಸರು ಹಾಗೂ ಆಡಳಿತ ಈ ಸಮಾರಂಭವನ್ನು ಗಂಭೀ ರವಾಗಿ ಪರಿಗಣಿಸಲಿಲ್ಲ ಮತ್ತು ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಲು ವಿಫಲ ವಾಗಿದ್ದರು ಎಂದು ವರದಿಯಲ್ಲಿ ಹೇಳ ಲಾಗಿದೆ. ಭೋಲೆ ಬಾಬಾ ಎಂದು ಹೆಸರಾ ಗಿರುವ ಸೂರಜ್‌ಪಾಲ್ ಆಯೋಜಿಸಿದ್ದ ಸತ್ಸಂಗದಲ್ಲಿ ಕಾಲ್ತುಳಿತ ಸಂಭವಿಸಿತ್ತು. ಉತ್ತರ ಪ್ರದೇಶ ಸರ್ಕಾರ ಈ ಘಟನೆ ಯನ್ನು ವಿಶೇಷ ತನಿಖಾ ತಂಡದ ತನಿಖೆಗೆ ವಹಿಸಿತ್ತು. ಎಸ್.ಐ.ಟಿ. ವರದಿ ಆಧರಿಸಿ ಸ್ಥಳೀಯ ಎಸ್‌ಡಿಎಂ, ತಹಶೀಲ್ದಾರ್ ಸೇರಿದಂತೆ ಆರು ಜನರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಎಸ್‌ಡಿಎಂ ಸ್ಥಳ ಪರಿಶೀಲನೆ ನಡೆಸಿ ರಲಿಲ್ಲ ಹಾಗೂ ಸಮಾರಂಭದ ಬಗ್ಗೆ ಹಿರಿಯ ಅಧಿಕಾರಿ ಗಳಿಗೆ ತಿಳಿಸಿರಲಿಲ್ಲ. ಅವರು ಈ ಘಟನೆ ಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ.

# ಮ್ಯಾನ್‌ಹೋಲ್ ಬಾಯಿ ತೆರೆದು ರಸ್ತೆಯಲ್ಲಿ ಹರಿಯುತ್ತಿದ್ದರೂ ಗಮನಿಸದ ವಾರ್ಡ್ ಸದಸ್ಯ





## 17ನೇ ವಾರ್ಡಿನ ಪಾಲಿಕೆ ಸದಸ್ಯ ಅಜಯ್ ಕುಮಾರ್ ವರ್ತನೆ ವಿರುದ್ಧ ನಾಗರಿಕರ ಆಕ್ರೋಶ

ದಾವಣಗೆರೆ, ಜು. 9 - ಮಹಾನಗರ ಪಾಲಿಕೆಯ 17ನೇ ವಾರ್ಡಿನ ಪಿ.ಜೆ. ಬಡಾವಣೆಯ ಸದಸ್ಯ ಬಿ.ಜಿ. ಅಜಯಕುಮಾರ್ ಕಾಣೆಯಾಗಿದ್ದು, ಅವರನ್ನು ಹುಡುಕಿಕೊಡುವಂತೆ ಪಿ.ಜೆ. ಬಡಾವಣೆಯ ನಾಗರಿಕರು ಮನವಿ ಮಾಡಿದ್ದಾರೆ.

ವಾರ್ಡ್‌ನಲ್ಲಿ ಸಾಕಷ್ಟು ತೊಂದರೆಗಳು ಇದ್ದರೂ ಸಹ ವರ್ಷಗಳ ಕಾಲ ಪಾಲಿಕೆ ಸದಸ್ಯರು ಬರದೇ ನಿರ್ಲಕ್ಷ್ಯ ವಹಿಸಿದ್ದಾರೆ. ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರೂ ಸಹ ಸಂಪರ್ಕಕ್ಕೆ ಸಿಗುತ್ತಿಲ್ಲ. ಮಹಾನಗರ ಪಾಲಿಕೆಗೆ ವಾರ್ಡ್ ಸಮಸ್ಯೆಗಳ ಬಗ್ಗೆ ತಿಳಿಸಿದರೆ ಪಾಲಿಕೆ ಸದಸ್ಯರನ್ನು ಸಂಪರ್ಕಿಸುವಂತೆ ತಿಳಿಸುತ್ತಿದ್ದಾರೆ ಎಂದು ನಾಗರಿಕರು ದೂರಿದ್ದಾರೆ.

ವಾರ್ಡ್‌ನ ಪ್ರಮುಖ ರಸ್ತೆ - ಪ್ರತಿನಿತ್ಯ ನೂರಾರು ಜನರು, ಶಾಲಾ ಮಕ್ಕಳು ಓಡಾಡುವ ಕಾನ್ವೆಂಟ್ ರಸ್ತೆಯಲ್ಲಿ ಕಳೆದ 3 ದಿನಗಳಿಂದ ಒಳಚರಂಡಿ ತುಂಬಿ ಹರಿಯುತ್ತಿದ್ದರೂ ಸಹ ಅಜಯಕುಮಾರ್ ಇತ್ತ ತಿರುಗಿ ನೋಡಿಲ್ಲ ಎಂದು ನಾಗರಿಕರು ಆರೋಪಿಸಿದ್ದಾರೆ.

ಪ್ರತಿನಿತ್ಯ ಸಾವಿರಾರು ಮಕ್ಕಳು ಓಡಾಡುವ ಈ ರಸ್ತೆಯಲ್ಲಿ ಹಾಗೂ ಪಿ.ಜೆ. ಬಡಾವಣೆಯಲ್ಲಿ ಆಸ್ಪತ್ರೆ ಮತ್ತು ಕ್ಲಿನಿಕ್‌ಗಳಿರುವುದರಿಂದ ಸಾವಿರಾರು ಜನ ಆಗಮಿಸಲಿದ್ದು, ಒಳಚರಂಡಿ ನೀರು ರಸ್ತೆಯಲ್ಲಿ ಹರಿಯುವುದರಿಂದ ಮಹಾಮಾರಿ ಡೆಂಗ್ಯೂ ಅಂತಹ ಸಾಕ್ರಾಮಿಕ ರೋಗಗಳಿಗೆ ಮಕ್ಕಳು ಬಲಿ ಆಗಲಿದ್ದಾರೆ ಎಂದು ನಾಗರಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಅಜಯಕುಮಾರ್ ಅವರು ಕಳೆದ 2-3 ವರ್ಷಗಳಿಂದ ವಾರ್ಡ್‌ನಲ್ಲಿ ಕಾಣಿಸದೇ ಇದ್ದು, ಅವರು ಪಾಲಿಕೆ ಸದಸ್ಯರು ಇದ್ದರೋ, ಇಲ್ಲವೋ ಎಂಬುದನ್ನು ಆಯುಕ್ತರು ಸ್ಪಷ್ಟನೆ ನೀಡಲಿ. ಇಲ್ಲವೇ ಸಾರ್ವಜನಿಕರ ಕೆಲಸ ಮಾಡದ ಅಜಯಕುಮಾರ್ ಅವರನ್ನು ಪಾಲಿಕೆ ಸದಸ್ಯ ಸ್ಥಾನದಿಂದ ವಜಾಗೊಳಿಸಲಿ ಎಂದು ನಾಗರಿಕರಾದ ಮಧು ಪವಾರ್, ವಾಟಾಳ್ ನಾಗರಾಜ್, ಪ್ರಭುಕುಮಾರ್, ಬುನಿಯನ್ ಭಾಸ್ಕರ್, ರಾಜು ಚೌಹಾಣ್, ಪರಸಪ್ಪ, ರೇವಣಪ್ಪ, ಸುರೇಶ್, ಕಿಶೋರ್ ಜೈನ್, ಗುರುರಾಜ್, ಅಶು ಸಾವನ್, ಪರಶುರಾಮ್, ಪ್ರದೀಪ್, ಗೀತಾ ಜಗದೀಶ್, ಪ್ರಿಯಾ, ಪ್ರೇಮಾ, ಲಲಿತಮ್ಮ, ಜಗದೀಶ್, ಗೋಪಾಲ್, ಶ್ರೀಕಾಂತ್ ಬಗೇರ ಇನ್ನು ಮುಂತಾದರು ಆಗ್ರಹಿಸಿದ್ದಾರೆ.

## ಪುರಿ : ದೇವರ ಮೂರ್ತಿ ಬಿದ್ದು 9 ಜನರಿಗೆ ಗಾಯ

ಭುವನೇಶ್ವರ, ಜು. 9 - ಪುರಿ ಜಗನ್ನಾಥ ದೇವಾಲಯದ ಬಲಭದ್ರ ದೇವರ ಮೂರ್ತಿಯನ್ನು ರಥದಿಂದ ಇಳಿಸುವಾಗ ಅದು ದೇವಾಲಯದ ಸೇವಕರ ಮೇಲೆ ಬಿದ್ದು 9 ಜನ ಗಾಯಗೊಂಡಿದ್ದಾರೆ. ಇವರಲ್ಲಿ ಐವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಲ್ವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ ಎಂದು ಪುರಿ ಜಿಲ್ಲಾಧಿಕಾರಿ ಸಿದ್ಧಾರ್ಥ ಶಂಕರ್ ತಿಳಿಸಿದ್ದಾರೆ. ರಥದಿಂದ ಮರದ ಬೃಹತ್ ಮೂರ್ತಿಯನ್ನು ಇಳಿಸುವಾಗ ಈ ಅವಘಡ ನಡೆದಿದೆ.


ನಮ್ಮ 11ನೇ ಶಾಖೆ ಬೆಣ್ಣೆನಗರಿ ದಾವಣಗೆರೆಯಲ್ಲಿ
ಪ್ರಾರಂಭೋತ್ಸವ
PRAVEEN CAPITAL YOUR DREAM OUR CAPITAL Since 1994
ಈ ಶುಭ ಸಮಾರಂಭಕ್ಕೆ ಎಲ್ಲರಿಗೂ ಹಾರ್ದಿಕ ಸ್ವಾಗತ
ದಿನಾಂಕ 10 ಜುಲೈ 2024 ಬುಧವಾರ | ಬೆಳಿಗ್ಗೆ 09-03 ಗಂಟೆಗೆ | ಸ್ಥಳ : ನಿಶ್ಚಿತ್ ಟವರ್ಸ್ #1885/6, ಕುಂದುವಾಡ ರಸ್ತೆ ರಿಂಗ್ ರೋಡ್ ಹತ್ತಿರ, ದಾವಣಗೆರೆ-04
ಈ ಶಾಖೆಯು ಅತ್ಯುನ್ನತ ಮಟ್ಟಕ್ಕೆ ಬೆಳೆಯಲು ನಿಮ್ಮೆಲ್ಲರ ಶುಭ ಹಾರೈಕೆ ಹಾಗೂ ಪ್ರೋತ್ಸಾಹವಿರಲಿ

ಸತ್ಯ ಶಂಕರ್ ಕೆ ಮ್ಯಾನೇಜಿಂಗ್ ಡೈರೆಕ್ಟರ್ | ರಂಜಿತಾ ಶಂಕರ್ ಎಕ್ಸಿಕ್ಯೂಟಿವ್ ಡೈರೆಕ್ಟರ್ | ಅಮೋಘ್ ಜೆ ರೈ ಸಿಇಓ
ಹೊಸ ಮತ್ತು ಹಳೆ ವಾಹನಗಳಿಗೆ ವಿಶೇಷವಾದ ಸಾಲ ಸೌಲಭ್ಯಗಳು ಲಭ್ಯವಿವೆ
+91 99163223302 ಶ್ರೀಕಾಂತ್ ಭಾದ್ರಿ ಬ್ರಾಂಚ್ ಮ್ಯಾನೇಜರ್ ದಾವಣಗೆರೆ
ಪ್ರಧಾನ ಕಛೇರಿ : ಪ್ರವೀಣ್ ಕ್ಯಾಪಿಟಲ್ ಪ್ರೈ. ಲಿ. ಶ್ರೀ ಗಣೇಶ ಕಾಂಪ್ಲೆಕ್ಸ್, ದರ್ಬೆ, ಪುತ್ತೂರು


## ವೈದ್ಯಕೀಯ ನಿರ್ಲಕ್ಷ್ಯದ ಶಿಕ್ಷೆಯಲ್ಲಿ ಬದಲಾವಣೆ ಇಲ್ಲ

ನವದೆಹಲಿ, ಜು. 9 - ಭಾರತೀಯ ನ್ಯಾಯ ಸಮಿತಿ ಕುರಿತು ಭಾರತೀಯ ವೈದ್ಯಕೀಯ ಒಕ್ಕೂಟ ವ್ಯಕ್ತಪಡಿಸುತ್ತಿರುವ ಕಳವಳಕ್ಕೆ ಯಾವುದೇ ಆಧಾರವಿಲ್ಲ. ನಿರ್ಲಕ್ಷದಿಂದ ಸಾವು ಸಂಭವಿಸಿದ ಸಂದರ್ಭದಲ್ಲಿ ವಿಧಿಸಲಾಗುವ ಶಿಕ್ಷೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಭಾರತೀಯ ನ್ಯಾಯ ಸಮಿತಿಯ ವಿರುದ್ಧ ಐ.ಎಂ.ಎ. ಪ್ರತಿಭಟನೆ ನಡೆಸಲು ನಿರ್ಧರಿಸಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಈ ಸ್ಪಷ್ಟನೆ ನೀಡಲಾಗಿದೆ.

ವೈದ್ಯಕೀಯ ಪ್ರಕ್ರಿಯೆ ಸಂದರ್ಭದಲ್ಲಿ ನಿರ್ಲಕ್ಷ್ಯದಿಂದ ಸಾವು ಸಂಭವಿಸಿದಾಗ ಎರಡು ವರ್ಷಗಳ ಶಿಕ್ಷೆ ಹಾಗೂ ದಂಡ ಇರಲಿದೆ ಎಂದು ಮೂಲಗಳು ತಿಳಿಸಿವೆ.

ವೈದ್ಯಕೀಯ ಸೇವೆ ಸೇರಿದಂತೆ ಯಾವುದೇ ಸಂದರ್ಭದಲ್ಲಿ ನಿರ್ಲಕ್ಷದಿಂದ ಸಾವು ಸಂಭವಿಸಿದರೆ ಎರಡು ವರ್ಷ ಶಿಕ್ಷೆ ವಿಧಿಸುವ ಅಂಶ ಈ ಹಿಂದಿನ ಭಾರತೀಯ ದಂಡ ಸಂಹಿತೆಯಲ್ಲೂ ಇತ್ತು. ಹೊಸ ಕಾಯ್ದೆಯಲ್ಲೂ ಸಹ ವೈದ್ಯಕೀಯ ಸೇವೆ ವೇಳೆ ನಿರ್ಲಕ್ಷದಿಂದ ಸಾವು ಸಂಭವಿಸಿದರೆ ಗರಿಷ್ಠ ಶಿಕ್ಷೆಯ ಪ್ರಮಾಣ ಎರಡು ವರ್ಷವಾಗಿದೆ ಎಂದು ಮೂಲಗಳು ತಿಳಿಸಿವೆ.

## ನಗರಕ್ಕೆ ನಾಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್




ದಾವಣಗೆರೆ, ಜು. 9 - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ನಾಡಿದ್ದು ದಿನಾಂಕ 11 ರ ಗುರುವಾರ ನಗರಕ್ಕೆ ಆಗಮಿಸಲಿದ್ದಾರೆ.

ಅಂದು 10.30 ಕ್ಕೆ ಬಿಐಇಟಿ ಕಾಲೇಜಿನ ಎಸ್.ಎಸ್.ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿರುವ ವಿಶ್ವ ಜನಸಂಖ್ಯಾ ದಿನ-2024 ಕಾರ್ಯಕ್ರಮಕ್ಕೆ ಸಚಿವರು ಚಾಲನೆ ನೀಡುವರು.

ನಂತರ ಮಧ್ಯಾಹ್ನ 12.30 ಕ್ಕೆ ಆರೋಗ್ಯ ಇಲಾಖಾ ವ್ಯಾಪ್ತಿಯ ಆಸ್ಪತ್ರೆಗಳಿಗೆ ಭೇಟಿ ಮತ್ತು ಪರಿಶೀಲನೆ ಮಾಡುವ ಸಚಿವರು, ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸುವರು.

## 2023-24ರಲ್ಲಿ 4.7 ಕೋಟಿ ಉದ್ಯೋಗ ಸೃಷ್ಟಿ : ಆರ್‌ಬಿಐ



ಮುಂಬೈ, ಜು. 9 - 2023-24ರ ಸಾಲಿನಲ್ಲಿ ಭಾರತದಲ್ಲಿ 4.7 ಕೋಟಿ ಉದ್ಯೋಗಗಳು ಸೃಷ್ಟಿಯಾಗಿವೆ. 27 ವಲಯಗಳಲ್ಲಿ 64.33 ಕೋಟಿ ಜನರು ಉದ್ಯೋಗದಲ್ಲಿದ್ದಾರೆ ಎಂದು ರಿಸರ್ವ್ ಬ್ಯಾಂಕ್ ಮಾಹಿತಿ ತಿಳಿಸಿದೆ. ಮಾರ್ಚ್ 2023ರ ಅಂತ್ಯದಲ್ಲಿ ಉದ್ಯೋಗದಲ್ಲಿದ್ದವರ ಸಂಖ್ಯೆ 59.67 ಕೋಟಿ ಆಗಿತ್ತು ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಈ ಸಾಲಿನಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಶೇಕಡ 6ರ ಬೆಳವಣಿಗೆ ಆಗಿದೆ. ಕಳೆದ ವರ್ಷ ಉದ್ಯೋಗ ಸೃಷ್ಟಿಯಲ್ಲಿ ಶೇಕಡ 3.2ರ ಬೆಳವಣಿಗೆ ಆಗಿತ್ತು.

### ಭದ್ರಾ ಜಲಾಶಯ



ನೀರಿನ ಮಟ್ಟ : 134 ಅಡಿ 2 ಇಂಚು
ಒಳ ಹರಿವು : 7806 ಕ್ಯೂಸೆಕ್ಸ್
ಹೊರ ಹರಿವು : 156 ಕ್ಯೂಸೆಕ್ಸ್
ಕಳೆದ ವರ್ಷ : 140 ಅಡಿ 3 ಇಂಚು


ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಬೆಳೆಯುತ್ತಿರುವ ISO CERTIFIED ಕಂಪನಿ ಇದೀಗ ದಾವಣಗೆರೆಯಲ್ಲಿ, ಟೆಲಿಕಾಲಿಂಗ್ ಕೆಲಸಕ್ಕೆ 500 + (ಹುಡುಗ / ಹುಡುಗಿಯರು) ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
+ 9187925 09454
+ 9187927 68154


## ಶಂಕರ್ ನಾಯ್ಕ ನಿಧನ



ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದ ವಾಸಿ

**ಶಂಕರ್ ನಾಯ್ಕ**

(75 ವರ್ಷ) ಇವರು, ದಿನಾಂಕ : 9.7.2024ರ ಮಂಗಳವಾರ ಬೆಳಿಗ್ಗೆ 6.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 10.7.2024ರ ಬುಧವಾರ ಬೆಳಗ್ಗೆ 10ಕ್ಕೆ ನಾಗರಕಟ್ಟೆಯ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ : ಪತ್ನಿ : ಲಕ್ಷ್ಮಿಬಾಯಿ
ಮಕ್ಕಳಾದ: ರಾಜನಾಯ್ಕ, ಕವಿತಾಬಾಯಿ, ತ್ಯಾಗಮೂರ್ತಿ ನಾಯ್ಕ, ಪಾರಿಬಾಯಿ, ಉಮಾ ಬಾಯಿ, ರವಿಕುಮಾರ್, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಕೊರಾ ವಂಶಸ್ಥರು, ನಾಗರಕಟ್ಟೆ, ಫೋ. : 9743051468, 9488 46444

## ಶೆಟ್ಟೋಜಿರಾವ್ ಸಾಳಂಕಿ ನಿಧನ



ದಾವಣಗೆರೆ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ 6ನೇ ಕ್ರಾಸ್ ವಾಸಿ,

**ಶ್ರೀ ಶೆಟ್ಟೋಜಿರಾವ್ ಸಾಳಂಕಿ**

ಅವರು ದಿನಾಂಕ 9-7-2024ರ ಮಂಗಳವಾರ ತಡರಾತ್ರಿ 12.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 93 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಸಹೋದರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10-7-2024ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**

- ಎಸ್. ರಮೇಶ್‌ರಾವ್ ಸಾಳಂಕಿ, ಜೆಟಿಎಸ್ ಟ್ರಾನ್ಸ್‌ಪೋರ್ಟ್
- ಎಸ್. ಉಮೇಶ್‌ರಾವ್ ಸಾಳಂಕಿ, ಶ್ರೀ ದುರ್ಗಾಂಬಾ ಟ್ರಾವೆಲ್ಸ್ ಏಜೆನ್ಸಿ
- ಬಾಬುರಾವ್ ಸಾಳಂಕಿ, ಮಾಜಿ ನಗರಸಭಾ ಸದಸ್ಯರು, ದಾವಣಗೆರೆ.
- ನಾಗರಾಜರಾವ್ ಸಾಳಂಕಿ ಮತ್ತು

ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಸಹೋದರರು, ಮೊಮ್ಮಕ್ಕಳು
ಮೊ. : • 94484 15595 • 96201 51365 • 98864 40832 • 7795505996

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas